# ಬೃಂದಾವನ ವಾಣಿ



## ಒಂದೇ ಗುರಿಯ ಕಡೆಗೆ ಪಯಣ !!

ಸಂಚಿಕೆ ೨೯

ಆಗಸ್ಟ್ ೨೦೨೦

## ಈ ಸಂಚಿಕೆಯಲ್ಲಿ


ಸಂಪಾದಕೀಯ ............೩

ಅಧ್ಯಕ್ಷರ ನುಡಿ ............೪

ಶ್ರೀ ರಾಘವೇಂದ್ರ ಸ್ವಾಮಿ ............೬

ಶ್ರೀ ಜಯತೀರ್ಥರು ............೧೦

ಕೊರೋನ ..............೧೨

ಮೊಬೈಲ್ ನೆನಪುಗಳು!............೧೩

ರಂಗೋಲಿಯ ಮಹತ್ವ!...........೧೪

ಅಡುಗೆ ರುಚಿ ............೧೫

ಕವನ–ಗೆಳೆತನ............೧೬

ಕವನ - ಸ್ವಾತಂತ್ರ್ಯ....೧೮

ಕವನ - ಕಲಾಚತುರೆಗೆ ಭಾವ ನಮನ ...೧೯

ಕವನ - ಮನೆಯ ಬಾಗಿಲು..........೨೦

ಕವನ -ಕವನ ಗುಚ್ಛ .........೨೧

ಚಿಣ್ಣರ ಚಿತ್ತಾರ ............೨೨

ನೇಸರದ ಚಿತ್ತಾರ .........೨೪



**ಸಂಚಿಕೆ ವಿನ್ಯಾಸ ಮತ್ತು ಸಲಹೆ** –ಪ್ರಶಾಂತ್ ಮುರುಗೇಂದ್ರಪ್ಪ

**ಮುಖಪುಟ ಚಿತ್ರ**: "ಸಕಲೇಶಪುರ - ಸುಬ್ರಮಣ್ಯ" ರೈಲ್ವೇ ಹಳಿ ಚಾರಣ

**ಕೃಪೆ** : ರಾಕೇಶ್ ಗೌಡ rakhigowda

**ಕೊನೆಪುಟ ಚಿತ್ರ** : ಒಲಂಪಿಕ್ ನ್ಯಾಷನಲ್ ಪಾರ್ಕ್ , ವಾಷಿಂಗ್ಟನ್ ರಾಜ್ಯ

**ಕೃಪೆ** : ಪ್ರಮೋದ್ ದುತ್ತರ್ಗಿ duttargiphoto



**ಬೃಂ**ದಾವನ ವಾಣಿಯ ಓದುಗರೆಲ್ಲರಿಗೂ ನಮಸ್ಕಾರಗಳು.

ಆಗಸ್ಟ್ ತಿಂಗಳಿನ ದ್ವೈ ಮಾಸಿಕವನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ. ಕಳೆದ ಎಂಟು ತಿಂಗಳುಗಳು ಒಂದು ರೀತಿಯಲ್ಲಿ ಹಲವಾರು ವಿಸ್ಮಯಗಳನ್ನು ಸೃಷ್ಟಿಸಿದ ವರ್ಷ ಇದು ಎನ್ನಬಹುದು. ಮಾರ್ಚ್ ತಿಂಗಳಿನಲ್ಲಿ ಆರಂಭಗೊಂಡ ಕೊರೋನಾ ಸಂಬಂಧಿಸಿದ ಬದಲಾವಣೆಗಳು ಇನ್ನೂ ಬದಲಾಗುತ್ತಲೇ ಇವೆ. ಮಕ್ಕಳಿಂದ ವೃದ್ಧರವರೆಗೆ ವಿಶ್ವದಾದ್ಯಂತ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಕೊರೋನಾ ಪೀಡಿತರೇ ಎನ್ನಬಹುದು.

ಆದಷ್ಟು ಬೇಗ ಲಸಿಕೆಗಳು ಹೊರಬರಲಿ, ನಮ್ಮೆಲ್ಲರ ಸಂಕಷ್ಟಗಳು ದೂರಾಗಲಿ ಎಂದು ಈ ವರ್ಷದ ಗೌರಿ-ಗಣೇಶ ಹಬ್ಬದಂದು ವಿಘ್ನೇಶ್ವರನನ್ನು ವಿಶೇಷವಾಗಿ ಪ್ರಾರ್ಥಿಸೋಣ. ಕಾಡ್ಗಿಚ್ಚು, ಅತಿವೃಷ್ಟಿ, ವೈರಸ್‌ನ ಹಾವಳಿ ಮತ್ತು ಇನ್ನೂ ಅನೇಕ ರೀತಿಯಲ್ಲಿ ನೊಂದಿರುವ ವಿಶ್ವದೆಲ್ಲೆಡೆ ಶಾಂತಿ ನೆಲೆಸಲಿ.

ಅಧ್ಯಕ್ಷರ ಚುನಾವಣೆಯ ವಿಚಾರವಾಗಿ ರಂಗೇರುತ್ತಿರುವ ಅಮೇರಿಕದಲ್ಲಿ "ಅರಾಜಕತೆ"ಯ ಜೊತೆಗೆ ನಿರುದ್ಯೋಗ ಮತ್ತು ಕುಸಿದ ಹಲವಾರು ಉದ್ಯಮಗಳ ವಿಚಾರಗಳು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಲಿಬರ್ಟಿ, ಫ್ರೀಡಮ್ ಎಂದುಕೊಂಡು ಸ್ವೇಚ್ಛೆಯಿಂದ ಓಡಾಡಿಕೊಂಡಿದ್ದವರಿಗೆಲ್ಲ ಕೊರೋನಾ ಮಹಾಮಾರಿ ಒಂದು ರೀತಿಯಲ್ಲಿ ಲೆವೆಲರ್ ಆಗಿದ್ದು, ಪಾಠ ಕಲಿಸಿದೆ. ಈ ನಡುವೆ ತಲೆ ಎತ್ತಿದ್ದ ಜನಾಂಗೀಯ ಬೇಧಕ್ಕೆ ಸಂಬಂಧಿಸಿದ ಪ್ರೊಟೆಸ್ಟ್‌ಗಳು ಸ್ವಲ್ಪ ಕಡಿಮೆಯಾದಂತೆ ಕಂಡರೂ, ಅವು ಈಗಲೋ ಆಗಲೋ ಸ್ಫೋಟಿಸುವ ಜ್ವಾಲಾಮುಖಿಗಳಾಗಿ ಜನರ ಅಂತರಂಗದಲ್ಲಿ ನೆಲೆ ಊರಿವೆ. ಶಾಲೆಗೆ ಹೋಗುವ ಮಕ್ಕಳು ಆನ್‌ಲೈನ್ ಮಾಧ್ಯಮಕ್ಕೆ ಒಗ್ಗಿಕೊಳ್ಳುವುದನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲ ಎನ್ನುವಂತಾಗಿದೆ. ಹೀಗೆ ಎಲ್ಲ ವರ್ಗದವರೂ ಕಳೆದ ಆರು ತಿಂಗಳುಗಳಲ್ಲಿ ಅನೇಕ ಸಂಕಷ್ಟಗಳನ್ನು ಎದುರುಗೊಂಡಿದ್ದಾರೆ.  ಅಮೇರಿಕದ ಆಂತರಿಕ ಕಷ್ಟಗಳು ಸಾಲವು ಎಂಬಂತೆ ದಿನೇದಿನೇ ಪ್ರಬಲವಾಗಿ ಬೆಳೆಯುತ್ತಿರುವ ಚೀನಾ ದೇಶದ ಸಂಬಂಧವೂ ಹಳಸುತ್ತ ಬಂದಿದೆ.  ಒಟ್ಟಿನಲ್ಲಿ ಉತ್ತರ ಅಮೇರಿಕದ ಮುಂಬರುವ ಕೆಲವು ತಿಂಗಳುಗಳು ರಾಜಕೀಯವಾಗಿ ಬಹಳ ಕ್ರಿಯಾಶೀಲವಾಗಿರುವುದನ್ನು ಬಿಟ್ಟರೆ, ಸಾಮಾಜಿಕವಾಗಿ ಯಾವುದೇ ಆಶಾಕಿರಣವೂ ಗೋಚರಿಸುತ್ತಿಲ್ಲ. ಆದರೆ, ವಿಶ್ವದೆಲ್ಲೆಡೆ ಕೊರೋನಾ ವೈರಸ್ಸನ್ನು ಎದುರಿಸಲು, ಹೊಸ ಲಸಿಕೆಯನ್ನು ತಯಾರಿಸುವ ನಿಟ್ಟಿನಲ್ಲಿ ಅನೇಕ ಬೆಳವಣಿಗೆಗಳು ಆಶಾವಾದವನ್ನು ಇನ್ನೂ ಜೀವಂತವಾಗಿರಿಸಿವೆ ಎನ್ನಬಹುದು.

ಭಾರತದಲ್ಲಿ ವಿಪರೀತ ನೆರೆಹಾವಳಿ. ಕಳೆದ ವರ್ಷ ಮಹಾ ಸಂಕಷ್ಟಕ್ಕೆ ಈಡಾಗಿ, ಇನ್ನೂ ಚೇತರಿಸಿಕೊಳ್ಳದ ಜನ ಜೀವನಕ್ಕೆ ಮತ್ತೊಮ್ಮೆ ಅತಿವೃಷ್ಟಿಯ ಹೊಡೆತ ಬಿದ್ದಿದೆ. ಅಸ್ಸಾಂ ರಾಜ್ಯವೊಂದರಲ್ಲೇ ಸುಮಾರು ಐವತ್ತು ಲಕ್ಷ ಜನರು ನೆರೆಸಂತ್ರಸ್ತರಾಗಿದ್ದು ದೇಶದ ಉದ್ದಗಲಕ್ಕೂ ಪ್ರವಾಹದ ಭೀತಿಯಲ್ಲೇ ಅನೇಕ ಜನ ಬದುಕುವಂತಾಗಿದೆ. ಟೆಕ್ನಾಲಜಿಯಲ್ಲಿ ಕೆಲಸ ಮಾಡುವವರು ನಗರಗಳಿಂದ ದೂರವಾಗುತ್ತಿದ್ದರೆ, ಕಾರ್ಮಿಕ ವರ್ಗವೂ ಸಹ ತಮ್ಮ ಹಳ್ಳಿಗಳತ್ತ ಮುಖ ಮಾಡುತ್ತಿದೆ.  ಹೀಗೆ ಒಂದು ರೀತಿಯ ರಿವರ್ಸ್ ಮೈಗ್ರೇಶನ್ ಪ್ರಕ್ರಿಯೆ ಚಾಲನೆಯಲ್ಲಿದ್ದು, ಇದರ ಪರಿಣಾಮ ಈ ದಶಕದ ಉದ್ದಕ್ಕೂ ತನ್ನ ಪ್ರಭಾವವನ್ನು ಬೀರಬಹುದು.  ಕೆಲವು ತಿಂಗಳುಗಳ ಹಿಂದೆ, ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಸೋಂಕಿತರ ಸಂಖ್ಯೆ ಭಾರತದ ಉದ್ದಗಲಕ್ಕೂ ದಿನೇದಿನೇ ಹೆಚ್ಚುತ್ತಲೇ ಇರುವುದು ಕಳವಳಕಾರಿಯಾಗಿದೆ. ಉಳಿದ ಎಲ್ಲ ದೇಶಗಳಲ್ಲಿ ಸೋಂಕಿತರ ಸಂಖ್ಯೆ ಕಡಿಮೆ ಆಗುತ್ತಿದ್ದರೆ, ಭಾರತದಲ್ಲಿ ಕಡಿಮೆ ಆಗುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಒಂದು ವೇಳೆ ಸಮಯಕ್ಕೆ ಸರಿಯಾಗಿ ಲಸಿಕೆ ಸಿಗದೇ ಹೋದರೆ, ಭಾರತದ ಜನತೆ ಮತ್ತಷ್ಟು ಸಂಕಷ್ಟಕ್ಕೆ ಈಡಾಗಬಹುದು.

ಕೊರೋನಾ ವೈರಸ್ಸಿನ ಪ್ರಭಾವವೋ ಏನೋ ಕ್ರಿಯಾಶೀಲರಿಗೆ ಈಗ ತಮ್ಮ ಮನೆಯ ವ್ಯಾಪ್ತಿಯಲ್ಲಿ ಅನೇಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಒಂದು ಸುವರ್ಣ ಅವಕಾಶ ಎನ್ನಬಹುದು. ನಮ್ಮ ಬರಹಗಾರರಿಗೆ, ಓದುಗರಿಗೆ ಈ ರೀತಿಯಿಂದಲಾದರೂ ಸ್ವಲ್ಪ ಬಿಡುವು ಸಿಕ್ಕಿದೆ. ಈ ಕಂತಿನ ಬೃಂದಾವನ ವಾಣಿಯಲ್ಲಿ ಭಾರತದ ಸ್ವಾತಂತ್ರ್ಯೋತ್ಸವ, ರಾಘವೇಂದ್ರ ಆರಾಧನೆ ಮತ್ತು ಗೌರಿ-ಗಣೇಶ ಹಬ್ಬಕ್ಕೆ ಸಂಬಂಧಿಸಿದಂತೆ ವಿಶೇಷ ಲೇಖನಗಳಿವೆ.  ನಮ್ಮ ಕರೆಗೆ ಓಗೊಟ್ಟು ಲೇಖನಗಳನ್ನು ಕಳಿಸಿದ ಎಲ್ಲ ಬರಹಗಾರರಿಗೂ, ಸುಂದರವಾದ ಚಿತ್ರಗಳನ್ನು ಕಳಿಸಿದ ಮಕ್ಕಳಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.  ಈ ಸಂಚಿಕೆಯನ್ನು ನಿಮ್ಮ ಬಂಧು-ಮಿತ್ರರೊಡನೆ ಹಂಚಿಕೊಳ್ಳಿ. ಈ ಸಂಚಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ.

ಪ್ರಧಾನ ಸಂಪಾದಕರು,



ಸಂಪಾದಕ ಮಂಡಳಿ: **ದಾಶರಥಿ ಘಟ್ಟು, ಅಜೇಯ ರಾವ್, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ, ಲಕ್ಷ್ಮಿ ಕೊಲಾಳ್**

    



**ಬೃಂ**ದಾವನ ಕನ್ನಡ ಬಂಧುಗಳಿಗೆ ನಮಸ್ಕಾರಗಳು.

ದಿನಗಳು ಕಳೆದಂತೆ, ಈ ವರ್ಷ ತನ್ನ ವಿಶೇಷತೆಗಳನ್ನು ಇನ್ನೂ ಅನೇಕಾನೇಕ ರೀತಿಯಲ್ಲಿ ಹೊರಹಾಕುತ್ತಿದೆ ಎನ್ನಬಹುದು. ಕಳೆದ ಮಾರ್ಚ್ ತಿಂಗಳಿನಿಂದ ಆರಂಭವಾಗಿ ಈ ಕೊರೋನಾ ವೈರಸ್‌ಗೆ ಹೆದರಿಕೊಂಡು ಬದುಕಬೇಕಾಗಿ ಬಂದ ಜೀವನ ಶೈಲಿ, ಇನ್ನೂ ಮಾರ್ಪಾಡು ಹೊಂದುತ್ತಲೇ ಇದೆ. ಬೇಸಿಗೆ ಬರುತ್ತಿದ್ದಂತೆ ಅನೇಕ ಕಡೆಗಳಲ್ಲಿ ಲಸಿಕೆ ಕಂಡು ಹಿಡಿದಿರುವ ಬಗ್ಗೆ ಮಾತುಗಳು ಕೇಳಿ ಬರುತ್ತಿದ್ದು, ಮುಂದೊಂದು ದಿನ ಎಲ್ಲ ಕಡೆಗೆ ಔಷಧಿ ಸಿಗುವ ದಿನಗಳು ಹತ್ತಿರ ಬರಲಿ ಎನ್ನುವ ಆಶಯ ನಮ್ಮದು. ಅಲ್ಲಿಯವರೆಗೆ ಶಾಲೆಗೆ ಹೋಗುವ ಮಕ್ಕಳಿಂದ ಹಿಡಿದು ವೃದ್ಧರವರೆಗೆ, ಎಲ್ಲರೂ ಒಂದಲ್ಲ ಒಂದು ರೀತಿಯ ಕೊರೋನಾ ಪೀಡಿತ ಜೀವನವನ್ನು ಸಾಗಿಸಬೇಕಾಗಿರುವುದು ಈಗಿನ ನಿಜಸ್ಥಿತಿ, ಅಷ್ಟೆ.

ನಮ್ಮ ಬೃಂದಾವನ ಕನ್ನಡ ಸಂಘದ ಕಾರ್ಯಕ್ರಮಗಳು ಎಂದಿನಂತೆ ಆನ್‌ಲೈನ್ ಮಾಧ್ಯಮದಲ್ಲಿ ಮುಂದುವರೆಯುತ್ತಲೇ ಇವೆ. ಕಳೆದ ಐದು ತಿಂಗಳುಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ವಾರಾಂತ್ಯದ ಕಾರ್ಯಕ್ರಮಗಳು ಬಿತ್ತರಗೊಂಡಿವೆ. ನಮ್ಮ ಸೌರಭ ತಂಡದ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳ ವ್ಯಾಪ್ತಿ ವಿಸ್ತೃತವಾಗಿದ್ದು, ನಾವು ಆರೋಗ್ಯ, ಮಾಹಿತಿ, ಮನರಂಜನೆ, ಕನ್ನಡ ಶಾಲಾ ಮಕ್ಕಳ ಕಾರ್ಯಕ್ರಮ, ಗಮಕ, ಹರಿಕಥೆ, ನಾಟಕ, ಹೀಗೆ ಅನೇಕ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದ್ದೇವೆ. ಜೊತೆಗೆ, ಪ್ರತಿಯೊಂದು ವಾರವೂ ಸಹ ಒಂದಲ್ಲ ಒಂದು ಚಾರಿಟೆಬಲ್ ಸಂಸ್ಥೆಗೋಸ್ಕರ ಹಣವನ್ನು ಸಂಗ್ರಹಿಸಿದ್ದೇವೆ. ಅಲ್ಲದೇ, ಉತ್ತರ ಅಮೇರಿಕದ ಇತರ ಕನ್ನಡ ಸಂಘಗಳ ಜೊತೆಗೆ ಕೈ ಜೋಡಿಸಿ ಹಲವಾರು ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದ್ದೇವೆ. ಈ ನಿಟ್ಟಿನಲ್ಲಿ, ಮಾಹಿತಿ ಮತ್ತು ಮನರಂಜನೆ ವಿಚಾರದಲ್ಲಿ ನಮ್ಮ ಎಲ್ಲ ಕಾರ್ಯಕ್ರಮಗಳೂ ಯಶಸ್ವಿಯಾಗಿವೆ ಎಂದು ತಿಳಿಸಲು ಸಂತೋಷವಾಗುತ್ತದೆ. ಮೇ ತಿಂಗಳ ಕೊನೆಯಿಂದ ಜುಲೈ ಅಂತ್ಯದವರೆಗೆ, ನಾವು ಮ್ಯೂಸಿಕ್ ಮ್ಯಾನ್ಸ್ ಸಂಗೀತ ಸರಣಿ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದೆವು. ಕರ್ನಾಟಕದ ಕಲಾವಿದರ ಸಹಾಯಾರ್ಥ ಹಮ್ಮಿಕೊಂಡ ಈ ಕಾರ್ಯಕ್ರಮ ಸರಣಿ ಅದ್ಭುತವಾಗಿ ಮೂಡಿಬಂದು, ನಮ್ಮೆಲ್ಲರನ್ನೂ ಚಿತ್ರಸಂಗೀತದ ಪರಿಧಿಯಲ್ಲಿ ಹತ್ತಿರ ತಂದಿದೆ ಎನ್ನಬಹುದು. ಇದರ ಜೊತೆಗೆ ಆಗಸ್ಟ್ ತಿಂಗಳಲ್ಲಿ, ನಮ್ಮ ಯುವ ಬೃಂದಾವನದ ಸದಸ್ಯರು ಬಹಳ ಮುತುವರ್ಜಿಯಿಂದ ನಡೆಸಿಕೊಂಡು ಬರುತ್ತಿರುವ ಯುವ-2-ಯುವ ಆನ್‌ಲೈನ್ ತರಗತಿಗಳು ಅಚ್ಚುಕಟ್ಟಾಗಿ ನಡೆದುಕೊಂಡು ಬರುತ್ತಿವೆ. ಕನ್ನಡ ಮತ್ತು ಕನ್ನಡೇತರ ವಿಷಯಗಳನ್ನು ಆನ್‌ಲೈನ್ ತರಗತಿಗಳ ಮೂಲಕ ಸಕ್ರಿಯವಾಗಿ ಭಾಗವಹಿಸಿ ತಮ್ಮ ಉತ್ಸಾಹವನ್ನು ಹಂಚುತ್ತಿರುವ ಯುವ ಬೃಂದಾವನ ಸದಸ್ಯರಿಗೆಲ್ಲ ಅನಂತ ಧನ್ಯವಾದಗಳು.

ಇನ್ನು ಶಾಲೆಗಳು ಆರಂಭವಾಗುವುದಕ್ಕಿಂದ ಮೊದಲು, ನಾವು ಗಣೇಶನ ಹಬ್ಬದ ತರುವಾಯ ಮುಖ್ಯವಾಗಿ ಮೂರು ಕಾರ್ಯಕ್ರಮಗಳನ್ನು ಎದುರು ನೋಡುತ್ತಿದ್ದೇವೆ: ಇದೇ ಬರುವ ಭಾನುವಾರ ತ್ರೀವೇಣಿ ಕನ್ನಡ ಕೂಟದ ಸಹಭಾಗಿತ್ವದಲ್ಲಿ ಸಾಮೂಹಿಕ ಗಣೇಶ ಪೂಜೆ ಮತ್ತು ಮನರಂಜನಾ ಕಾರ್ಯಕ್ರಮಗಳು, ತಿಂಗಳ ಕೊನೆಯಲ್ಲಿ ವರ್ಚುವಲ್ ನಾವಿಕೋತ್ಸವ ಮತ್ತು ಸೆಪ್ಟೆಂಬರ್ ಮೊದಲ ವಾರಾಂತ್ಯದಲ್ಲಿ ವರ್ಚುವಲ್ ಅಕ್ಕ ವಿಶ್ವಕನ್ನಡ ಸಮ್ಮೇಳನ. ಈ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಈ ನಿಟ್ಟಿನಲ್ಲಿ ಕಳೆದೆರೆಡು ತಿಂಗಳುಗಳ ಕಾಲ ಬಹಳ ಕ್ರಿಯಾಶೀಲವಾಗಿ ಬೇಸಿಗೆಯನ್ನು ಕಳೆಯುವ ವಿಶೇಷ ಅವಕಾಶ ನಮ್ಮದಾಗಿತ್ತು ಎನ್ನಲು ಅಡ್ಡಿಯಿಲ್ಲ

ಮುಂಬರುವ ಫಾಲ್ ತಿಂಗಳುಗಳಲ್ಲಿ ಬರುವ ಕಾರ್ಯಕ್ರಮಗಳ ಬಗ್ಗೆ "ಬೃಂದಾವನ ವಾರ್ತೆ"ಯ ಮುಖೇನ ತಿಳಿಸಲಾಗುವುದು. ಕನ್ನಡ ಶಾಲೆಯ ತರಗತಿಗಳೂ ಆನ್‌ಲೈನ್ ಮಾಧ್ಯಮದಲ್ಲೇ ಆರಂಭವಾಗುತ್ತಿವೆ, ದಯವಿಟ್ಟು ನಿಮ್ಮ ಮಕ್ಕಳನ್ನು ಆಯಾ ತರಗತಿಯಲ್ಲಿ ನೋಂದಾಯಿಸಿಕೊಳ್ಳಿ. ಈ ವರ್ಷದ ಸರ್ವ ಸದಸ್ಯರ ಸಭೆ, ಮುಂದಿನ ಕಾರ್ಯಕಾರಿ ಸಮಿತಿಯ ಆಯ್ಕೆ ಮತ್ತು ವರ್ಷಾಂತ್ಯದ ಮಕ್ಕಳ ದಿನಾಚರಣೆ ಕಾರ್ಯಕ್ರಮಗಳೆಲ್ಲವೂ ಆನ್‌ಲೈನ್ ಮಾಧ್ಯಮದಲ್ಲೇ ಆಗಬಹುದು ಎನ್ನುವ ಮುನ್ಸೂಚನೆ ಸಿಗುತ್ತಿದೆ. ಜೊತೆಗೆ, ಈ ವರ್ಷದ "ವನವಾಣಿ" ಸಂಚಿಕೆಯೂ ಕೂಡಾ ಎಲೆಕ್ಟ್ರಾನಿಕ್ ಮಾಧ್ಯಮದಲ್ಲೇ ಮೂಡಿಬರಲಿದೆ. ನಮ್ಮ ಈ ಎಲ್ಲ ಕಾರ್ಯಕ್ರಮಗಳು ಹೇಗೆ ಮೂಡಿಬರುತ್ತಿವೆ? ಯಾವ ಬದಲಾವಣೆಗಳನ್ನು ಮಾಡುವುದು ಸೂಕ್ತ ಎಂದು ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಎಲ್ಲರಿಗೂ ಗೌರಿ-ಗಣೇಶ ಹಬ್ಬದ ಶುಭಾಶಯಗಳು.

ನಮಸ್ಕಾರ.



**ಸತೀಶ್ ಹೊಸನಗರ**

ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ

**ಸೌರಭ ತಂಡ**ದ ಪರವಾಗಿ


5th Navikotsava
ನಾವಿಕೋತ್ಸವ-20
Aug 28, 29 & 30
HAPPY INDEPENDENCE DAY
Early Bird
Independence Day special
registration is open!
$10 Per Family for all 4 sessions.
It is free for all Donors.
REGISTER NOW!
ಆಶಾ ಕಾರ್ಯಕರ್ತರ ಸಹಾಯಾರ್ಥ
VIRTUAL


ಅಕ್ಕ ವರ್ಚುಯಲ್ ವಿಶ್ವ ಕನ್ನಡ ಸಮ್ಮೇಳನ 2020
AKKA VIRTUAL WORLD
KANNADA CONFERENCE
4th, 5th and 6th September, 2020
ABOUT AKKA
COMMITTEES
PROGRAMS
FORUMS
SPONSORSHIP
CONTACT US
ಅಮೇರಿಕ ಕನ್ನಡ ಕೂಟಗಳ ಆಗರ (ಅಕ್ಕ)
ASSOCIATION OF KANNADA KOOTAS OF AMERICA
ಅಕ್ಕ ವರ್ಚುಯಲ್ ವಿಶ್ವ ಕನ್ನಡ ಸಮ್ಮೇಳನ 2020
AKKA Virtual WORLD KANNADA CONFERENCE 2020
In coordination with SAHYADRI KANNADA SANGHA, SEATTLE & PACIFIC NORTHWEST KANNADIGAS
AKKA
4th, 5th, & 6th, September 2020



# ಶ್ರೀ ರಾಘವೇಂದ್ರ ಸ್ವಾಮಿ

*ಶುಭಾ ಸತೀಶ್*

**ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರಥಾಯಚ।**

**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥**

**ಕ**ಲಿಯುಗದಲ್ಲಿ ಸಕಲ ಇಷ್ಟಾರ್ಥ ಕೊಡುವ, ಭವ ರೋಗ ವೈದ್ಯ, ಕಲ್ಪವೃಕ್ಷ ಕಾಮಧೇನು ಎಂದು ಪ್ರಸಿದ್ಧರಾದ ಯತಿಗಳು ಶ್ರೀ ರಾಘವೇಂದ್ರ ಸ್ವಾಮಿ. ಇವರ ಗುಣಗಳು ಅನೇಕ: ಅಪರೋಕ್ಷ ಜ್ಞಾನಿ, ಭಕ್ತೋದ್ದಾರಕ, ಸದ್ಗುಣಾಸಾಂದ್ರ, ಭಕ್ತಾಗ್ರಣಿ, ದೀನ ಬಂಧು, ಎಷ್ಟು ಹೇಳಿದರು ಸಾಲದು.



SRI RAGHAVENDRA

ಈ ವರ್ಷ ನಾವೆಲ್ಲರೂ ತುಂಬಾ ಕಾತುರದಿಂದ ಕಾಯುತ್ತಿರುವುದು ರಾಯರ ಆರಾಧನೆ. ಈ ವರ್ಷ ಶ್ರೀ ರಾಘವೇಂದ್ರ ಸ್ವಾಮಿ ಆರಾಧನೆಯನ್ನು ಈ ದಿನಗಳಲ್ಲಿ ಆಚರಿಸಲಾಯಿತು

04-ಆಗಸ್ಟ್ -20 (ಮಂಗಳವಾರ): ಪೂರ್ವಾ ಆರಾಧನೆ
05-ಆಗಸ್ಟ್ -20 (ಬುಧವಾರ): ಮಧ್ಯ ಆರಾಧನೆ
06-ಆಗಸ್ಟ್ -20 (ಗುರುವಾರ): ಉತ್ತರ ಆರಾಧನೆ

ಅಪಾರೋಕ್ಸ ಜ್ಞಾನಿಗಳ ಪ್ರಶಂಸಾಪತ್ರಗಳ ಆಧಾರದ ಮೇಲೆ ಇದು ಜನಪ್ರಿಯ ನಂಬಿಕೆಯಾಗಿದೆ, ರಾಯರು ಎಂಬುದು ಶಂಕುಕರ್ಣ ಎಂಬ ಕರ್ಮಜ ಭಕ್ತನ ಅವತಾರವಾಗಿದೆ. ಅವತಾರಗಳು ಕೆಳಕಂಡಂತಿವೆ:

**ಶಂಕುಕರ್ಣ:**ಶಂಕುಕರ್ಣನು ಚತುರ್ಮುಖ ಬ್ರಹ್ಮನ ಪೂಜೆ ಸಹಾಯಕ ನಾಗಿದ್ದ ಕರ್ಮಜ ದೇವತೆ. ಒಂದು ದಿನ, ಪೂಜೆಗೆ ತಡವಾಗಿ ಹೂವು ತಂದಾಗ, ಬ್ರಹ್ಮನು "ಬೂಲೋಕ ದಲ್ಲಿ ದೈತ್ಯ ನಾಗಿ ಹುಟ್ಟು" ಎಂದು ಶಪಿಸಿದನು.

**ಶ್ರೀ ಪ್ರಹ್ಲಾದ ರಾಜ:**ಸತ್ಯಯುಗದಲ್ಲಿ, ಪ್ರಹ್ಲಾದನು ಅಸುರ ರಾಜ ಹಿರಣ್ಯಕಶಿಪುನ ಮಗನಾಗಿ ಜನಿಸಿದನು. ಪ್ರಹ್ಲಾದನು ಹುಟ್ಟಿನಿಂದ ಅಸುರನಾಗಿದ್ದರೂ, ಅವನು ಶ್ರೀ ನಾರಾಯಣನ ಮಹಾನ್ ಭಕ್ತ. ಹಂಗೆ, ಶ್ರೀ ನರಿಸಿಂಹ ಅವತಾರದ ಕಾರಣವು ಆದನು.

**ಶ್ರೀ ಬಹ್ಲೀಕ ರಾಜ:**ದ್ವಾಪರ ಯುಗದಲ್ಲಿ, ಬಹ್ಲಿಕಾ ರಾಜನು ಕೃಷ್ಣನ ಭಕ್ತನಾಗಿದ್ದನು. ಕುರುಕ್ಷೇತ್ರ ಯುದ್ಧದ ಹದಿನಾಲ್ಕನೇ ದಿನದಲ್ಲಿ ಭೀಮನಿಂದ ಮೃತಪಟ್ಟಣನು.

**ಶ್ರೀ ವ್ಯಾಸರಾಜ:**ಮಧ್ವ ಮತದಲ್ಲಿ ಪ್ರಸಿದ್ದವಾದ ಯತಿತ್ರಯರಲ್ಲಿ ಒಬ್ಬರು,ಶ್ರೀವ್ಯಾಸರಾಜರು. ವಿಜಯನಗರದ ಸಾಮ್ರಾಜ್ಯದ ಕೃಷ್ಣ ದೇವರಾಯನಿಗೆ ಕುಹಯೋಗವನ್ನು ಪರಿಹರಿಸಿದರು. ಇವರು, 732 ಮುಖ್ಯ ಪ್ರಾಣ ದೇವರನ್ನು ಸ್ಥಾಪಿಸಿದ್ದಾರೆ. ಕನ್ನಡ ದಾಸ ಸಾಹಿತ್ಯಕ್ಕೆ ಶ್ರೀ ಪುರಂದರ ದಾಸರು, ಶ್ರೀ ಕನಕ ದಾಸರಂತಹ ರತ್ನಗಳನ್ನು ಕೊಟ್ಟ ಮಹನೀಯರು ಇವರು.

**ಜನನ:**

ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿಶ್ರೀ ಕೃಷ್ಣ ಭಟ್ಟ ಎಂಬ ಹೆಸರಿನ ವೀಣೆ ವಿದ್ವಾನ್ಸರಿದ್ದರು. ಶ್ರೀ ತಿಮ್ಮಣ್ಣ ಭಟ್ಟರು ಶ್ರೀ ಕೃಷ್ಣ ಭಟ್ಟರ ಮೊಮ್ಮಗ. ಶ್ರೀ ತಿಮ್ಮಣ್ಣ ಭಟ್ಟ ಮತ್ತು ಅವರ ಪತ್ನಿ ಶ್ರೀಮತಿ ಗೋಪಿಕಾಂಬ ಅವರಿಗೆ ಗುರುರಾಜಾಚಾರ್ಯ ಎಂಬ ಮಗ ಮತ್ತು ವೆಂಕಟಾಂಬ ಎಂಬ ಮಗಳು ಇದ್ದರು. ತಿರುಪತಿ ವೆಂಕಟೇಶ್ವರನ ಆಶೀರ್ವಾದದಿಂದ, ಅವರಿಗೆ ಇನ್ನೊಂದು ಮಗ ಹುಟ್ಟಿದನು. ಆ ಮಗು ಫಾಲ್ಗುಣ ಶುಕ್ಲ ನವಮಿ 1595, ಭುವನಗಿರಿಯಲ್ಲಿ ಹುಟ್ಟಿತು. ತಂದೆಯು ಅವನಿಗೆ ವೆಂಕಣ್ಣ ಭಟ್ಟ ಎಂದು ಹೆಸರಿಟ್ಟರು. ತಿರುಪತಿ ತಿಮ್ಮಪ್ಪನ ದೆಸೆಯಿಂದ ಹುಟ್ಟಿದ ಆ ಹುಡುಗನಿಗೆ ವೆಂಕಟನಾಥ, ವೆಂಕಟಾಚಾರ್ಯ ಎಂದು ಕರೆಯಲಾಗಿತ್ತು.

**ಆರಂಭಿಕ ಜೀವನ:**

ವೆಂಕಟನಾಥ ಬಾಲ್ಯದಿಂದಲೂ ಬಹಳ ಬುದ್ಧಿವಂತ ಹುಡುಗನಾಗಿದ್ದನು. ತಿಮ್ಮಣ್ಣ ಭಟ್ಟರು ಓಂಕಾರ (**ॐ**) ಬರೆದು ಇದು ದೇವರ ಪ್ರಾತಿನಿಧ್ಯ ಎಂದು ಹೇಳಿದಾಗ, 'ಓಂ' ನಂತಹ ಸಣ್ಣ ವಸ್ತುವು ದೇವರ ಅನಂತ ಶ್ರೇಷ್ಠತೆಯನ್ನು ಹೇಗೆ ಸೆರೆಹಿಡಿಯಬಲ್ಲದು ಎಂದು ವೆಂಕಟನಾಥನು ತನ್ನ ತಂದೆಯನ್ನು ಪ್ರಶ್ನಿಸಿದನು. ಚಿಕ್ಕ ಹುಡುಗನ ತೇಜಸ್ಸು ಮತ್ತು ಶಾಸ್ತ್ರದ ಒಳನೋಟವನ್ನು ತಿಮ್ಮಣ್ಣ ಭಟ್ಟರು ಕಂಡು ಆಶ್ಚರ್ಯಚಕಿತರಾದರು. ವೆಂಕಟನಾಥ ಕೂಡ ವೀಣಾ ನುಡಿಸಲು ಕಲಿತ. ಅವರ ತಂದೆಯ ನಿಧನದ ನಂತರ, ವೆಂಕಟನಾಥನನ್ನು ಅವರ ಸಹೋದರ ಶ್ರೀ ಗುರುರಾಜ ಭಟ್ಟರು ಬೆಳೆಸಿದರು ಮತ್ತು ಮಧುರೈನಲ್ಲಿ ಅವರ ಸೋದರ ಮಾವ ಲಕ್ಷ್ಮೀನರಸಿಂಹಾಚಾರ್ಯರ ಮಾರ್ಗದರ್ಶನದಲ್ಲಿ ಶಿಕ್ಷಣದ ಆರಂಭಿಕ ಭಾಗವನ್ನು ಪೂರ್ಣಗೊಳಿಸಿದರು.

**ಮದುವೆ:**

1614 ರಲ್ಲಿ ಮಧುರೈನಿಂದ ಹಿಂದಿರುಗಿದ ನಂತರ, ಶ್ರೀ ವೆಂಕಟನಾಥ ಅವರು ಸರಸ್ವತಿ ಬಾಯಿಯನ್ನು ವಿವಾಹವಾದರು. ಅದೇ ವರ್ಷದಲ್ಲಿ ಶ್ರೀ ಲಕ್ಷ್ಮೀನಾರಾಯಣಾಚಾರ್ಯ ಎಂಬ ಮಗ ಜನಿಸಿದ. ಅವರ ಮದುವೆಯ ನಂತರ, ಶ್ರೀ ವೆಂಕಟನಾಥ ಮತ್ತು ಅವರ

ಕುಟುಂಬವು ಕುಂಬಕೋಣಂಗೆ ತೆರಳಿ ಅಲ್ಲಿ ತಮ್ಮ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರ ಅಡಿಯಲ್ಲಿ ದ್ವೈತ ವೇದಾಂತ, ವ್ಯಾಕರಣ ಮತ್ತು ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದರು.

ಅವರು ತಮ್ಮ ಗುರುಗಳು ಕಲಿಸಿದ ಪಾಠಗಳ ಬಗ್ಗೆ ತಮ್ಮದೇ ಆದ ವ್ಯಾಖ್ಯಾನ ಮತ್ತು ಟಿಪ್ಪಣಿಗಳನ್ನು ಬರೆಯುತ್ತಿದ್ದರು.ವೆಂಕಟನಾಥರು ಶ್ರೀ ಮೂಲ ರಾಮ ಮತ್ತು ಶ್ರೀ ಪಂಚಮುಖ ಮುಖ್ಯಾಪ್ರಣ ದೇವರ ಪರಮ ಭಕ್ತರಾಗಿದ್ದರು.

ಅವರು ತಮ್ಮ ಪೂರ್ವಾಶ್ರಮ ಜೀವನದ ಬಹುಪಾಲು ಭಾಗವನ್ನು ಸಂಸ್ಕೃತ ಮತ್ತು ಪ್ರಾಚೀನ ವೈದಿಕ ಗ್ರಂಥಗಳನ್ನು ಮಕ್ಕಳಿಗೆ ಕಲಿಸಿದರು. ಈ ಅವಧಿಯಲ್ಲಿ ಅವರು "ಅಪರಿಗ್ರೀಹ ವ್ರತ" ವನ್ನು ತೆಗೆದುಕೊಂಡರು, ಅದರಲ್ಲಿ ಅವರು ತಮ್ಮ ಸೇವೆಗಳಿಂದ ಯಾವುದೇ ಹಣ ಅಥವಾ ಜೀವನದ ಅಗತ್ಯಗಳನ್ನು ಎಂದಿಗೂ ಕೋರಲಿಲ್ಲ ಮತ್ತು ಅವರಿಗೆ ನೀಡಿದ್ದನ್ನು ಸ್ವೀಕರಿಸುತ್ತಿದ್ದರು. ಆದ್ದರಿಂದ ಕುಟುಂಬವು ಬಡತನದ ಜೀವನವನ್ನು ಸಹಿಸಬೇಕಾಯಿತು.

**ಸನ್ಯಾಸ ಸ್ವೀಕಾರ:**

ಹೀಗೆ ಅವರ ಜೀವನವು ದೇವರ ಆರಾಧನೆ ಮತ್ತು ಮಾನವೀಯತೆಯ ಸೇವೆಯಲ್ಲಿ ಕಳೆದಾಗ, ಅವರ ಆಧ್ಯಾತ್ಮಿಕ ಗುರುಗಳಾದ ಶ್ರೀ ಸುಧೀಂದ್ರ ತೀರ್ಥರು ಅವರ ಮಠದ ಉತ್ತರಾಧಿಕಾರಿಯನ್ನು ಹುಡುಕುತ್ತಿದ್ದರು. ಅವರ ಕನಸಿನಲ್ಲಿ ತಿರುಪತಿ ತಿಮ್ಮಪ್ಪನು ಬಂದು, ಶ್ರೀ ವೆಂಕಟನಾಥನು ಮಠಾಧೀಶನಾಗಿ ಉತ್ತರಾಧಿಕಾರಿಯಾಗಲು ಸರಿಯಾದ ವ್ಯಕ್ತಿ ಎಂದು ಸೂಚಿಸಿದನು. ಶ್ರೀ ವೆಂಕಟನಾಥನು ತನ್ನ ಹೆಂಡತಿ ಮತ್ತು ಮಗನ ಮೇಲಿನ ಜವಾಬ್ದಾರಿಯಿಂದ ಆರಂಭದಲ್ಲಿ ನಿರಾಕರಿಸಿದರು. ಆದರೆ ಶೀಘ್ರದಲ್ಲೇ ವಿದ್ಯಾ ಲಕ್ಷ್ಮಿದೇವಿಯಿಂದ ಆಶೀರ್ವದಿಸಲ್ಪಟ್ಟನು, ಅವರ ಕನಸಿನಲ್ಲಿ ಸನ್ಯಾಸಿಯಾಗಿ ಮೋಕ್ಷವನ್ನು ಪಡೆಯಬೇಕೆಂದು ದೇವಿಯು ಸೂಚಿಸಿದಳು. ಶ್ರೀ ವೆಂಕಟನಾಥರು ಇದನ್ನು ಶಕುನವೆಂದು ಪರಿಗಣಿಸಿ ಮನಸ್ಸು ಬದಲಾಯಿಸಿದರು. 1621 ರಲ್ಲಿ ತಂಜಾವೂರಿನಲ್ಲಿ ಫಾಲ್ಗುಣ ಶುಕ್ಲ ದ್ವಿತಿಯಾದಲ್ಲಿ ಸನ್ಯಾಸ ದೀಕ್ಷೆ ನಡೆಯಿತು.

**ಶ್ರೀ ರಾಘವೇಂದ್ರ ಸ್ವಾಮಿಯ ಪವಾಡಗಳು:**

ಶ್ರೀ ರಾಘವೇಂದ್ರ ಸ್ವಾಮಿ ಅನೇಕ ಪವಾಡಗಳು ಮಾಡಿದ್ದಾರೆ, ಅದನ್ನು ನಾವು ಇಂದಿಗೂ ನೋಡುತ್ತಿದ್ದೇವೆ. ಇಲ್ಲಿ, ಎರಡು ಕಥೆಗಳನ್ನು ಆಯ್ಕೆ ಮಾಡಲಾಗಿದೆ.

1. ಕುಂಬಕೋಣಂನಲ್ಲಿ ಶ್ರೀ ರಾಘವೇಂದ್ರ ಸ್ವಾಮಿಯವರ ಅವಧಿಯಲ್ಲಿ, ಒಟ್ಟಾರೆಯಾಗಿ ತಂಜಾವೂರು ಜಿಲ್ಲೆಯು 12 ವರ್ಷಗಳ ಕಾಲದ ತೀವ್ರ ಬರಗಾಲದ ಪರಿಣಾಮದಿಂದ ತತ್ತರಿಸಿತ್ತು. ತಂಜಾವೂರು ನಾಯಕ ಆಡಳಿತಗಾರ ಸೇವಪ್ಪ ನಾಯಕ್ ಆಧ್ಯಾತ್ಮಿಕ ಸಾಂತ್ವನಕ್ಕಾಗಿ ಸ್ವಾಮೀಜಿಯನ್ನು ಸಂಪರ್ಕಿಸಿದರು ಮತ್ತು ಕೆಲವು ಯಜ್ಞಗಳನ್ನು ಮಾಡಲು ಸೂಚಿಸಲಾಯಿತು. ಈ ವಿಧಿಗಳನ್ನು ನೆರವೇರಿಸಿದ ಕೂಡಲೇ ಈ ಪ್ರದೇಶವು ಮಳೆ ಮತ್ತು ಸಮೃದ್ಧಿಯಿಂದ ಹೊಂದಿತು. ಕೃತಜ್ಞತೆಯ ಸಂಕೇತವಾಗಿ, ಮಹಾರಾಜರು ಅಮೂಲ್ಯ ರತ್ನಗಳಿಂದ ಅಲಂಕರಿಸಿದ ಹಾರವನ್ನು ಮಠಕ್ಕೆ ಉಡುಗೊರೆಯಾಗಿ ನೀಡಿದರು.
2. ವೆಂಕಣ್ಣ ಎಂಬ ಬಡ ಬ್ರಾಹ್ಮಣ ಹುಡುಗ ರಾಯರ ಪರಮ ಭಕ್ತನಾಗಿದ್ದನು.ಶ್ರೀ ರಾಘವೇಂದ್ರ ಸ್ವಾಮಿ ಅವರನ್ನು ಭೇಟಿ ಮಾಡಿ ಅವರ ಆಶೀರ್ವಾದವನ್ನು ಪಡೆಯುವ ಬಯಕೆಯಿಂದ ಅವನು ತುಂಬಿದ್ದನು.ಒಂದು ದಿನ ರಾಯರು ಅವರ ಪುನರಾವರ್ತನೆಯು ಹಾದುಹೋಗುವಾಗ ಅವರ ಆಸೆ ಈಡೇರಿತು. ಅವನು ತಕ್ಷಣ ಪಲ್ಲಕ್ಕಿಯ ಕಡೆಗೆ ಓಡಿ ರಾಯರ ಮುಂದೆ ನಮಸ್ಕರಿಸಿದನು. ಶ್ರೀ ರಾಯರು ಅವನತ್ತ ನೋಡಿದರು ಮತ್ತು ಅವನ ಬಗ್ಗೆ ವಿಚಾರಿಸಿದರು. ವೆಂಕಣ್ಣನು ತನ್ನ ಅವಸ್ಥೆಯನ್ನು ವಿವರಿಸಿ, ಅಂಗೈಗಳನ್ನು ಚಾಚಿದನು. ರಾಯರು ಹುಡುಗನ ಮೇಲೆ ಕರುಣೆ ತೋರಿ, ಅವನಿಗೆ ಸ್ವಲ್ಪ ಮಂತ್ರಾಕ್ಷತೆ ನೀಡಿದರು. ಹುಡುಗನಿಗೆ ಮಂತ್ರಾಕ್ಷತೆ ಅನ್ನು ತಲೆಗೆ ಹಾಕಲು ಹೇಳಿ, ಅವನು ತೊಂದರೆಯಲ್ಲಿದ್ದಾಗಲೆಲ್ಲಾ ರಾಯರನ್ನು ಸ್ಮರಣೆ ಮಾಡಲು ಹೇಳಿದರು. ಒಂದು ದಿನ, ವೆಂಕಣ್ಣನು ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದಾಗ, ಒಬ್ಬ ಉದಾತ್ತ ವ್ಯಕ್ತಿ ಕುದುರೆಯಿಂದ ಇಳಿದು ಮತ್ತೊಂದು ಮರದ ಕೆಳಗೆ ವಿಶ್ರಾಂತಿ ಪಡೆಯುವುದನ್ನು ಅವನು ನೋಡಿದನು. ಕೆಲವು ಸಮಯದಲ್ಲಿ, ಅದು ಆಡೋನಿಯ ನವಾಬ್ ಎಂದು ಅವರು ಅರಿತುಕೊಂಡರು. ಸ್ವಲ್ಪ ಸಮಯದೊಳಗೆ, ಇನ್ನೊಬ್ಬ ವ್ಯಕ್ತಿ ಕುದುರೆಯ ಮೇಲೆ ಬಂದು ನವಾಬನಿಗೆ ಪತ್ರವನ್ನು ತಲುಪಿಸುವುದನ್ನು ನೋಡಿದನು. ನವಾಬ್ ಮತ್ತು ವ್ಯಕ್ತಿ ಇಬ್ಬರೂ ಅನಕ್ಷರಸ್ಥರಾಗಿದ್ದರಿಂದ, ಅವರು ಸುತ್ತಲೂ ನೋಡಿ ಹುಡುಗನನ್ನು ಕಂಡರು. ನವಾಬ್ ಚಿಕ್ಕ ಹುಡುಗನನ್ನು ಓದಲು ಕೇಳಿದ. ವೆಂಕಣ್ಣ ಕೂಡ ಅನಕ್ಷರಸ್ಥನಾಗಿದ್ದರಿಂದ ಆತಂಕಗೊಂಡ. ಅವನು ತಕ್ಷಣ ಮಂತ್ರಾಕ್ಷತೆಯನ್ನು ನೆನಪಿಸಿಕೊಂಡನು, ತನ್ನ ತಲೆಯ ಮೇಲೆ ಇಟ್ಟುಕೊಂಡು, "ರಾಘವೇಂದ್ರ, ರಾಘವೇಂದ್ರ" ಎಂದು ತನ್ನ ಮನಸ್ಸಿನಲ್ಲಿ ಜಪಿಸಿದನು. ಪವಾಡಸದೃಶವಾಗಿ, ಹುಡುಗನು ಸಲೀಸಾಗಿ ಓದಲು ಪ್ರಾರಂಭಿಸಿದನು. ಹುಡುಗ ನವಾಬನು ಕಾಯುತ್ತಿದ್ದ ಒಳ್ಳೆಯ ಸುದ್ದಿಯನ್ನು ಓದಿದನು: ಅವನ ಮಗನ ಜನನ! ಈ ಸುದ್ದಿ ಕೇಳಿದ ನವಾಬನು ತುಂಬಾ ಸಂತೋಷಗೊಂಡನು ಮತ್ತು ಹುಡುಗನಿಗೆ ಅವನ ಹಾರವನ್ನು ಕೊಟ್ಟನು. ಶ್ರೀ ರಾಯರು ವೆಂಕಣ್ಣನ ಮನಸ್ಸಿನಲ್ಲಿ ಇದ್ದ ಕಾರಣ, ಹುಡುಗ ಧೈರ್ಯದಿಂದ ನವಾಬನ ಮುಂದೆ ನಮಸ್ಕರಿಸಿ ತನ್ನ ಆಸ್ಥಾನದಲ್ಲಿ ಕೆಲಸ ಕೇಳಿದ. ಅವನು ನಿಷ್ಠೆಯಿಂದ ಮತ್ತು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಲು ಮುಂದಾದನು. ನವಾಬ್ ಹುಡುಗನ ಸಾಮರ್ಥ್ಯವನ್ನು ನೋಡಿ ಅವನಿಗೆ ಒಳ್ಳೆಯ ಕೆಲಸವನ್ನು ಕೊಟ್ಟನು. ಕಠಿಣ ಪರಿಶ್ರಮ ಮತ್ತು ಶ್ರದ್ಧೆಯ ಮೂಲಕ, ವೆಂಕಣ್ಣ ವಿಶ್ವಾಸಾರ್ಹ ದಿವಾನ್ ಆದರು. ಹೀಗೆ, ವೆಂಕಣ್ಣನ ಜೀವನ ರಾಯರ ಕೃಪೆಯಿಂದ ಒಳ್ಳೆ ಪರಿವರ್ತನೆಯಾಯಿತು.

**ರಾಯರ ಕೃತಿಗಳು:**

ಶ್ರೀ ರಾಘವೇಂದ್ರ ಸ್ವಾಮಿ ತಮ್ಮ ವ್ಯಾಖ್ಯಾನಗಳು ಮತ್ತು ಟಿಪ್ಪಣಿಗಳೊಂದಿಗೆ, ಸಾಮಾನ್ಯ ಜನರಿಗೆ ಮಧ್ವ ಶಾಸ್ತ್ರ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡಿದ್ದಾರೆ. ಆದ್ದರಿಂದ, ಅವರನ್ನು ವಿದ್ವಾಂಸರು "ಮಧ್ವ ಮಾತಂಬೋಧಿ ಚಂದ್ರ" ಎಂದು

ಉಲ್ಲೇಖಿಸುತ್ತಾರೆ. 45ಕ್ಕೂ ಹೆಚ್ಚು ಕೃತಿಗಳನ್ನು ರಾಯರು ಬರೆದಿದ್ದಾರೆ. ಅತ್ಯಂತ ಪ್ರಸಿದ್ಧವಾದದ್ದು "ಪರಿಮಳ" ಗ್ರಂಥದ ಮೇಲೆ ಬರೆದ ವ್ಯಾಖ್ಯಾನ "ಸುಧಾ". ಶ್ರೀ ರಾಯರು ರಚಿಸಿದ್ದ ಹಾಡು " ಇಂದು ಎನಗೆ ಗೋವಿಂದ", ಅವರ ಅಂಕಿತ "ಧೀರ ವೇಣುಗೋಪಾಲ".

ಶ್ರಾವಣ ಕೃಷ್ಣ ಪಕ್ಷ ದ್ವಿತೀಯ 1671 ರಂದು, ರಾಘವೇಂದ್ರ ಸ್ವಾಮಿ ಈ ಕಾರ್ಯಕ್ರಮವನ್ನು ವೀಕ್ಷಿಸಲು ನೆರೆದಿದ್ದ ನೂರಾರು ಭಕ್ತರಿಗೆ ಆತ್ಮವನ್ನು ಕಲಕುವ ಭಾಷಣ ಮಾಡಿದರು. ಅವರು ಮಂಚಾಲೆಯಲ್ಲಿ (ಪ್ರಸ್ತುತ ಮಂತ್ರಾಲಯ) ಜೀವಂತವಾಗಿ ಬೃಂದಾವನವನ್ನು ಪ್ರವೇಶಿಸಿದರು.ದ್ವಾಪರ ಯುಗದಲ್ಲಿ ಪ್ರಹ್ಲಾದ ರಾಜನು, ಈ ಜಾಗದಲ್ಲಿ ಶ್ರೀ ರಾಮನಿಗೆ ದೊಡ್ಡ ಯಜ್ಞ ಮಾಡಿದ ಕಾರಣ, ಶ್ರೀ ರಾಯರು, ಮಂಚಾಲೆಯನ್ನು ಆರಿಸಿಕೊಂಡರು. ಶ್ರೀವಾಧಿರಾಜರನ್ನು (ಸಶರೀರ ಬೃಂದಾವನ) ಹೊರತುಪಡಿಸಿ, ಶ್ರೀರಾಘವೇಂದ್ರ ಸ್ವಾಮಿ ವೃಂದಾವನವನ್ನು ಜೀವಂತವಾಗಿ ಪ್ರವೇಶಿಸಿದರು. ರಾಯರು ತಮ್ಮ ಬಲಗೈಯಲ್ಲಿ ಜಪ ಮಾಲಾವನ್ನು ಹಿಡಿದು, ವ್ಯಾಸಪೀಠದ ಮೇಲೆ ಸರ್ವಮೂಲಾ ಗ್ರಂಥ, ಟೀಕೆ, ಟಿಪ್ಪಣ್ಣಿಗಳು ಇಟ್ಟಿಕೊಂಡಿದ್ದರು.

ಶ್ರೀ ಅಪ್ಪಣಾಚಾರ್ಯರು ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಯ ಅಗ್ರಗಣ್ಯ ಶಿಷ್ಯರಲ್ಲಿ ಒಬ್ಬರಾಗಿದ್ದರು. ರಾಯರು ಅವರನ್ನು ತುಂಗಭದ್ರಾ ನದಿಯ ಎದುರಿನ ದಡಕ್ಕೆ ಕಳುಹಿಸಿದರು, ಇದರಿಂದಾಗಿ ಅವರು ಬೃಂದಾವನಕ್ಕೆ ಪ್ರವೇಶಿಸುವುದನ್ನು ತಡೆಯಲು ಪ್ರಯತ್ನಿಸಲಿಲ್ಲ. ತಮ್ಮ ಗುರುಗಳ ನಿರ್ಧಾರ ತಿಳಿದ ಕೂಡಲೇ, ಅಪ್ಪಣಾಚಾರ್ಯರು ಮಂಚಾಲೆಗೆ ಹಿಂತಿರುಗಿದರು.ತುಂಗಭದ್ರಾ ನದಿಯು ತುಂಬಿ ಹರಿಯುತ್ತಿತ್ತು, ಆದ್ದರಿಂದ ಅವರಿಗೆ ನದಿ ದಾಟಲು ಕಷ್ಟವಾಯಿತು. ಅಪ್ಪಣಾಚಾರ್ಯರು ರಾಯರ ಮೇಲೆ ಶ್ಲೋಕಗಳು ಹೇಳಲು, ನದಿಯು ದಾರಿ ಮಾಡಿಕೊಟ್ಟಿತು.



ಕೊನೆಯ ಸ್ತೋತ್ರದ ಮಧ್ಯದಲ್ಲಿದ್ದಾಗ, ಬೃಂದಾವನದ ಕಡೆಯ ಕಲ್ಲನ್ನು ಇಟ್ಟು ಮುಚ್ಚಿದ್ದರು. ಇದರಿಂದ, ಅಪ್ಪಣಾಚಾರ್ಯರಿಗೆ ಅತಿ ದುಃಖವಾಗಿ ಸ್ತೋತ್ರವನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಇದ್ದಕಿದ್ದಂತೆ, ಬೃಂದಾವನದ ಒಳಗಿನಿಂದ "ಸಾಕ್ಷಿ ಹಯಸ್ತೋತ್ರ ಹೀ" ಎಂದು ಕೇಳಿಸಿ, ಸ್ತೋತ್ರವನ್ನು ಪೂರ್ಣಗೊಳಿಸಿತು. ಶ್ರೀ ಹಯಗ್ರೀವ ಮತ್ತು ಪ್ರಹ್ಲಾದರನ್ನು ಸೂಚಿಸುತ್ತದೆ ಮತ್ತು ಅದರಿಂದ ಶ್ರೀಗುರು ರಾಘವೇಂದ್ರ ಸ್ವತಃ ಅಪ್ಪಣಾಚಾರ್ಯರ ಸ್ತೋತ್ರಕ್ಕೆ ಸಾಕ್ಷಿಯಾಗಿದ್ದರು.

ಶ್ರೀ ರಾಘವೇಂದ್ರ ಸ್ವಾಮಿಯವರ ಅವತಾರವು ಹೀಗಿರುತ್ತದೆ ಎಂದು ನಂಬಲಾಗಿದೆ:

1) ಭೌತಿಕವಾಗಿ ಭೂಮಿಯ ಮೇಲೆ 100 ವರ್ಷಗಳು.

2) ಜನರಲ್ಲಿ ತಮ್ಮ ಸಾಹಿತ್ಯ ಕೃತಿಯ ಮೂಲಕ ಬೃಂದಾವನದಲ್ಲಿ 300 ವರ್ಷಗಳು

3) ಭೌತಿಕ ರೂಪವಿಲ್ಲದೆ ಬೃಂದಾವನದಲ್ಲಿ 400 ವರ್ಷಗಳು

ಬೃಂದಾವನದಲ್ಲಿ ಒಟ್ಟು 700 ವರ್ಷಗಳು, ಶ್ರೀ ರಾಯರು ಸಮಾಜ ಮತ್ತು ಮಾನವಕುಲಕ್ಕೆ ದುಃಖ, ವಿಪತ್ತುಗಳಿಂದ ಹೊರಬರಲು ಸಹಾಯ ಮಾಡುತ್ತಿದ್ದಾರೆ.

ಶ್ರೀ ರಾಘವೇಂದ್ರ ಸ್ವಾಮಿಯವರ ಮುಖ್ಯ ವಿಚಾರಗಳು ಸರಳವಾಗಿ ಕೆಳಗಿನ ಪಟ್ಟಿಯಲ್ಲಿ ಇದೆ.

| | |
|---|---|
| ಮೂಲ ರೂಪ | ಶಂಕುಕರ್ಣ |
| 1 ನೇ ಅವತಾರ | ಪ್ರಹ್ಲಾದ ರಾಜ (ಸತ್ಯ ಯುಗ) |
| 2 ನೇ ಅವತಾರ | ಬಹ್ಲೀಕ ರಾಜ (ದ್ವಾಪರ ಯುಗ) |
| 3 ನೇ ಅವತಾರ | ಶ್ರೀ ವ್ಯಾಸರಾಜ (ಕಲಿಯುಗ) |
| ಜನ್ಮ ಹೆಸರು | ವೆಂಕಟ ನಾಥ |
| ಜನ್ಮ ಸ್ಥಳ | ಭುವನಗಿರಿ, ತಮಿಳುನಾಡು |
| ಜನನ | ಮನ್ಮಥನಾಮ ಸಂವತ್ಸಾರ, ಗುರುವಾರ, ಫಾಲ್ಗುಣ ಶುದ್ಧ ಸಪ್ತಮಿ, ಮೃಗಶಿರಾ ನಕ್ಷತ್ರ, ಕ್ರಿ.ಶ. 1595. |
| ಸನ್ಯಾಸದ ವರ್ಷ ಮತ್ತು ಸ್ಥಳ | ದುರ್ಮತಿ ಸಂವತ್ಸರ ಫಾಲ್ಗುಣ ಶುಕ್ಲ ದ್ವಿತೀಯ, ಕ್ರಿ.ಶ. 1621, ತಂಜಾವೂರು |
| ಆಶ್ರಮ ಹೆಸರು | ಶ್ರೀ ರಾಘವೇಂದ್ರ ತೀರ್ಥ |
| ಆಶ್ರಮ ಶಿಷ್ಯ | ಶ್ರೀ ಯೋಗೀಂದ್ರ ತೀರ್ಥ |
| ಬೃಂದಾವನ ಪ್ರವೇಶ | ವಿರೋಧಿ ಸಂವತ್ಸರ, ಶ್ರಾವಣ ಬಹುಳ, ದ್ವಿತೀಯ , ಕ್ರಿ. ಶ. 1671, ಮಂಚಾಲೆ |


ಉಲ್ಲೇಖಗಳು:

https://anandsp1.wordpress.com/2011/08/12/aradhana/

http://madhwatatwa.blogspot.com/2012/07/sri-jayatirtharu.html

https://www.sumadhwaseva.com/yatigalu/others/jayatheertharu/

http://madhwamrutha.org/sri-jayateertharu/


(——-0——)



# ಶ್ರೀ ಜಯತೀರ್ಥರು

ಶುಭಾ ಸತೀಶ್



ಮೂಲ ವೃಂದಾವನ

**ಚಿತ್ರೈ: ಪದೈಶ್ಚ ಗಂಭೀರೈರ್ವಾಕ್ಯೈರ್ಮಾನೈರಖಂಡಿತೈ: |**
**ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ||**
-ಶ್ರೀ ವ್ಯಾಸರಾಜರು(ನ್ಯಾಯಮೃತ)

ಅರ್ಥ:
ಶ್ರೀ ಜಯತೀರ್ಥರ ಮಾತುಗಳು ಗಂಭೀರದಿಂದ ತುಂಬಿವೆ. ಪ್ರತಿಯೊಂದು ಪದ ಅಥವಾ ವಾಕ್ಯಕ್ಕೂ ಆಳವಾದ ಅರ್ಥವಿದೆ. ಅವರು ಪ್ರತ್ಯಕ್ಷಾಧಿ ಪ್ರಮಾಣವನ್ನು ನೀಡಿರುವುದರಿಂದ ಅವರ ಮಾತುಗಳನ್ನು ಎಂದಿಗೂ ಖಂಡಿಸಲಾಗುವುದಿಲ್ಲ. ಎಂದೆಂದಿಗೂ ಇದು ಗುರು ಆಚಾರ್ಯ ಮಾಧ್ವ ಅವರ ಉದ್ದೇಶಗಳಿಂದ ತುಂಬಿದೆ. ಅದರಂತೆ ಅದು ಹೊಳೆಯುತ್ತಿದೆ.
ಶ್ರೀ ಜಯತೀರ್ಥರ ವಾಗ್ವೈಖರಿಯನ್ನು ಅವರು ಪದಗಳ ಲಾಲಿತ್ಯ, ಭಾವದ ಮಾಧುರ್ಯ, ಯುಕ್ತಿಗಳ ಜೋಡಣೆ, ಎಲ್ಲವೂ ಅದ್ಭುತ.



ಶ್ರೀ ಜಯತೀರ್ಥರ ಪಾದುಕಾ

**ಮಿಥ್ಯಾ ಸಿದ್ಧಾಂತ ದುರ್ಧ್ವಾಂತ ವಿಧ್ವಂಸನ ವಿಚಕ್ಷಣ: |**
**ಜಯತೀರ್ಥಾಖ್ಯ ತರಣೀ: ಭಾಸತಾಂ ನೋ ಹೃದಂಬರೇ |**
- ಶ್ರೀ ವ್ಯಾಸರಾಜರು(ತಾತ್ಪರ್ಯಚಂದ್ರಿಕಾ)
**ಯಸ್ಯ ವಾಕ್ಕಾಮಧೇನುರ್ನ: ಕಾಮಿತಾರ್ಥಾನ್ ಪ್ರಯಚ್ಚತಿ |**
**ಸೇವೇ ತಂ ಜಯಯೋಗೀಂದ್ರಂ ಕಾಮಬಾಣಛಿದಂ ಸದಾ ||**
- ಶ್ರೀ ಸತ್ಯಾತ್ಮ ತೀರ್ಥರು

ಅವರ ಮಾತುಗಳು ಕಾಮಧೇನುಗಳಂತೆ, ಅದು ನಮ್ಮೆಲ್ಲ ಆಸೆಗಳನ್ನು ಕಾಮಿತಾರ್ಥವನ್ನು ನೀಡುತ್ತದೆ. ಅವರ ಎಲ್ಲ ಆಸೆಗಳನ್ನು ಸೋಲಿಸಿದ ಮಹಾನ್ ಯೋಗೀಂದ್ರನ ಮುಂದೆ ನಾನು ಯಾವಾಗಲೂ ನಮಸ್ಕರಿಸುತ್ತೇನೆ.
ಕೆಲವು ದಿನಗಳ ಹಿಂದೆ ಜುಲೈ 10, 2020 ರಂದು (ಶುಕ್ರವಾರ), ಶ್ರೀ ಜಯತೀರ್ಥ ಆರಾಧನೆಯನ್ನು ಮಲಖೇಡದಲ್ಲಿ ಭವ್ಯವಾಗಿ ಆಚರಿಸಲಾಯಿತು. ಇಂದಿನ ಲೇಖನದಲ್ಲಿ, ಶ್ರೀ ಜಯತೀರ್ಥರ ಜೀವನ ಚರಿತ್ರೆಯನ್ನು ಓದೋಣ.
ದ್ವೈತ ವೇದಾಂತದಲ್ಲಿ ಶ್ರೀ ಜಯತೀರ್ಥರು ಅವರ ಹೆಸರನ್ನು ಯಾವಾಗಲೂ ಸ್ಮರಿಸಬೇಕು. ಟೀಕಾ ಬರೆಯುವ ಮತ್ತು ಮಾಧ್ವ ಶಾಸ್ತ್ರವನ್ನು ಎತ್ತಿಹಿಡಿಯುವ ಅವರ ಶೈಲಿಯನ್ನು ಯಾರೂ ಹೋಲಿಸಲಾಗುವುದಿಲ್ಲ. ಜಯತೀರ್ಥದ ನಂತರ ಬಂದ ಬಹುತೇಕ ಎಲ್ಲಾ ಗ್ರಂಥಗಳು, ಟೀಕಾಗಳು, ವ್ಯಾಕ್ಯಗಳು ಅವನ ಟೀಕಾಗಳನ್ನು ಮಾತ್ರ ಆಧರಿಸಿವೆ. ಅದಕ್ಕಾಗಿಯೇ ಅವರನ್ನು ಟೀಕಾಚಾರ್ಯ ಎಂದು ಕರೆಯಲಾಗುತ್ತದೆ. ಶ್ರೀ ಜಯತೀರ್ತರು ನಮ್ಮ ಶ್ರೀ ಮದ್ವಾಚಾರ್ಯ ಪೀಠದ ಆರನೇ ಮಠಾಧೀಶರು ಮತ್ತು ಅವರನ್ನು "ಟೀಕರಾಯರು", "ಟೀಕಾಚಾರ್ಯರು" ಮತ್ತು "ಟೀಕಕೃತ್ಪಾಧರು" ಎಂದು ಜನಪ್ರಿಯವಾಗಿ ಕರೆಯಲಾಗುತ್ತದೆ.

**"ವ್ಯಾಖ್ಯಾಸ್ಯತ್ಯೇಷ್ಟ ಗೋರಾಟ್ ":**

ಒಂದು ದಿನ ಶ್ರೀ ಮದ್ವಾಚಾರ್ಯಾರು ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದಾಗ, ಅವರ ಶಿಷ್ಯರೊಬ್ಬರು "ಅವರ ಕೃತಿಗಳಿಗೆ ಟಿಪ್ಪಣಿಗಳು ಮತ್ತು ವ್ಯಾಖ್ಯಾನಗಳನ್ನು ಯಾರು ಬರೆಯುತ್ತಾರೆ?" ಎಂಬ ವಿಷಯವನ್ನು ಎತ್ತಿದರು. ಎಲ್ಲಾ ಪಂಡಿತರು ಶ್ರೀ ಮದ್ವಾಚಾರ್ಯರು ತಮ್ಮ ಹೆಸರುಗಳನ್ನು ಸೂಚಿಸುತ್ತಾರೆ ಎಂಬ ಕಿರುನಗೆಯಿಂದ ಪರಸ್ಪರ ಮುಖಗಳನ್ನು ನೋಡುತ್ತಿದ್ದರು. ಇದಕ್ಕೆ ತದ್ವಿರುದ್ಧವಾಗಿ ಶ್ರೀ ಮದ್ವಾಚಾರ್ಯರು "ವ್ಯಾಖ್ಯಾಸ್ಯತ್ಯೇಷ್ಟ ಗೋರಾಟ್ "ಎಂದು ಹೇಳಿದರು - ಮುಂದೆ ಕುಳಿತಿದ್ದ ಎತ್ತು ಅವರ ಕೃತಿಗಳಿಗೆ ವ್ಯಾಖ್ಯಾನಗಳನ್ನು ಬರೆಯುತ್ತದೆ. ಪಂಡಿತರು ಕೋಪಗೊಂಡರು, ಸರ್ಪ ಕಚ್ಚುವಿಕೆಯಿಂದ ಎತ್ತು ಸಾಯುವಂತೆ ಶಪಿಸಿದರು. ಕೆಲವೇ ದಿನಗಳಲ್ಲಿ ಎತ್ತು ಹಾವು ಕಚ್ಚುವಿಕೆಯಿಂದ ಸತ್ತುಹೋಯಿತು. ಆ ಎತ್ತು ಇಡೀ ಸರ್ವಮೂಲವನ್ನು ಶ್ರೀಮದಾಚಾರ್ಯರಿಂದ ನೇರವಾಗಿ ಕೇಳಿದೆ.

**"ಕಿಮ್ ಪಶುಹೂ ದೇಹೇ":**

ಶ್ರೀ ಅಕ್ಷೋಭ್ಯಾ ತೀರ್ಥರು ತಮ್ಮ ಸರ್ವಜ್ಞ ಪೀಠಕ್ಕಾಗಿ ಶಿಷ್ಯನನ್ನು ಹುಡುಕುತ್ತಿದ್ದರು. ಒಂದು ದಿನ ಭೀಮರತಿ ನದಿಯ ದಡದಲ್ಲಿ ಕುಳಿತಿದ್ದರು. ಅಲ್ಲಿ ದೋಂಡು ಪಂತ (ದೋಂಡುರಾಯ) ಎಂಬ ಯುವ ಸುಂದರ ಹುಡುಗ ಕುದುರೆಯ ಮೇಲೆ ಸವಾರಿ ಮಾಡುತ್ತಾ ಬಾಯಾರಿಕೆಯಿಂದ ಬಂದು, ನದಿಗೆ ಹೋಗಿ, ಕುದುರೆಯ ಮೇಲೆ ಕುಳಿತು, ಕೈಗಳನ್ನು ಬಳಸದೆ ನೀರನ್ನು ಕುಡಿದನು. ಶ್ರೀ ಅಕ್ಷೋಭ್ಯಾ ತೀರ್ಥರು ಈ ದೃಶ್ಯವನ್ನು ನೋಡಿ ಸಂಸ್ಕೃತ "ಕಿಮ್ ಪಾಶು" ನಲ್ಲಿ ಉಚ್ಚರಿಸಿದ್ದಾರೆ. ನಿನ್ನ ಹಿಂದಿನ ಜನ್ಮದಲ್ಲಿ ಪ್ರಾಣಿಯಾಗಿದ್ದೀಯ?

ಈ ಧೋಂಡುರಾಯನು ಕೇಳಿ ದಿಗ್ಭ್ರಮೆಗೊಂಡು ಅವನ ಹಿಂದಿನ ಜನ್ಮಗಳನ್ನು ನೆನಪಿಸಿಕೊಂಡನು - ಅರ್ಜುನ ಮತ್ತು ಎತ್ತಿನ ಜನ್ಮ.ಕೂಡಲೇ ಅವನು ಶ್ರೀಅಕ್ಷೋಭ್ಯಾ ತೀರ್ಥರಿಗೆ ನಮಸ್ಕರಿಸಿ ಆಶ್ರಮಕ್ಕಾಗಿ ಮನವಿ ಮಾಡಿದನು.ಶ್ರೀ ಅಕ್ಷೋಭ್ಯಾ ತೀರ್ಥರ ಸಂತೋಷಕ್ಕೆ ಯಾವುದೇ ಮಿತಿಯಿಲ್ಲ. ಶ್ರೀಅಕ್ಷೋಭ್ಯಾ ತೀರ್ಥರು ಧೋಂಡುರಾಯನನ್ನು ಹಿರಿಯರ ಅನುಮತಿ ಪಡೆಯಲು ಕೇಳಿಕೊಂಡರು.ಧೋಂಡುರಾಯನು ಕೇಳಲಿಲ್ಲ ಮತ್ತು ತಕ್ಷಣ ಆಶ್ರಮವನ್ನು ಕೊಡುವಂತೆ ಒತ್ತಾಯಿಸಿದನು. ಇದನ್ನು ಕೇಳಿದ ಅವನ ತಂದೆ(ರಘುನಾಥ್ ದೇಶಪಾಂಡೆ), ಶ್ರೀಅಕ್ಷೋಭ್ಯಾ ತೀರ್ಥರು ಬಳಿ ಕೋಪದಿಂದ ಓಡಿ ಬಂದರು. ಅವರು ತುಂಬಾ ನಿರಾಶೆಗೊಂಡರು.ಅಕ್ಷೋಭ್ಯಾ ತೀರ್ಥರು ಬಲವಂತವಾಗಿ ಆಶ್ರಮವನ್ನು ನೀಡಿಲ್ಲ, ತನ್ನ ಸ್ವಂತ ಇಚ್ಚೆಯಂತೆ ಯತಿ ಆಗಬೇಕೆಂದು ಧೋಂಡುರಾಯ ಹೇಳಿದನು. ಧೋಂಡುರಾಯನಿಗೆ "ಶ್ರೀ ಜಯತೀರ್ಥ" ಎಂದು ಆಶ್ರಮ ಹೆಸರು ಅನುಗ್ರಹವಾಯಿತು. ಇವರ ಮುಂದಿನ ವಿದ್ಯಾಭ್ಯಾಸ ಆಚಾರ್ಯರ "ಶುಕವಾಣಿ" ಯಂತೆ ನಡೆಯಿತು.

**ದುರ್ಗಾ ಬೆಟ್ಟ:**

ಶ್ರೀ ಅಕ್ಷೋಭ್ಯ ತೀರ್ಥರ ಬೃಂದಾವನ ಪ್ರವೇಶ ನಂತರ, ಶ್ರೀ ಜಯತೀರ್ಥರು, ಗ್ರಂಥ ರಚನೆ ಮಾಡಲು ನಿರ್ಧರಿಸಿದರು. ಇದರ ಮುನ್ನ ದುರ್ಗಾ ಬೆಟ್ಟಕ್ಕೆ ಹೋಗಿ ತಪಸ್ಸು ಮಾಡಿದರು.ಅಲ್ಲಿ ಹುಲ್ಲು, ಪಂಚಗವ್ಯ ಪ್ರಾಶನ ತಿಂದು ತಪಸ್ಸು ಮಾಡಿದರು. ದುರ್ಗಾ ಮತ್ತು ಸರಸ್ವತಿ ದೇವಿಯರು ಘಂಟೆ ಮತ್ತು ಅಡಿಕೆಯನ್ನು ಕೊಟ್ಟು ಅನುಗ್ರಹಿಸಿದರು. ಶೇಷದೇವರು ನಾಲಿಗೆ ಮೇಲೆ ಅನುಗ್ರಹಿಸಿದರು. ಅದರಿಂದ, ಶ್ರೀ ಜಯತೀರ್ಥರಲ್ಲಿ ಶೇಷ ಆವೇಶವಿದೆ.

ಮುಖ್ಯ ವಿಚಾರಗಳು ಸರಳವಾಗಿ ಕೆಳಗಿನ ಪಟ್ಟಿಯಲ್ಲಿ ಇದೆ.

ಬೃಂದಾವನ: ಶ್ರೀ ಜಯತೀರ್ಥರ ಮೂಲ ಬೃಂದಾವನ ಗುಲ್ಬರ್ಗ ಜಿಲ್ಲೆಯ, ಮಳಖೇಡದಲ್ಲಿ ಇದೆ. ಹಾಗೂ, ಬೆಂಗಳೂರಿನಲ್ಲಿ ಶ್ರೀ ಉತ್ತರಾದಿ ಮಠ ಮತ್ತು ಚಾಮರಾಜಪೇಟೆಯಲ್ಲಿ ಶ್ರೀ ಶ್ರೀಪಾದರಾಜ ಮಠದಲ್ಲಿ ಇರುವುದು.

www.uttaradimath.org/parampara/sri-jayateertha

| | |
|---|---|
| ಪೂರ್ವಾಶ್ರಮ ಹೆಸರು | **ದೋಂಡು** ರಘುನಾಥ **ಪಂತ** |
| ಪೂರ್ವಾಶ್ರಮ ಪತ್ನಿ | ಭೀಮಾಬಾಯಿ |
| ಸನ್ಯಾಶ್ರಮ ಕಾಲಾವಧಿ | ಕ್ರಿ.ಶ.1364-1387 |
| ಆಶ್ರಮ ಗುರುಗಳು, | ಶ್ರೀ ಅಕ್ಷೋಭ್ಯ ತೀರ್ಥರು |
| ಅಂಶ | ಇಂದ್ರಾಮ್ಶ |
| ಆವೇಶ | ಶೇಷದೇವರು |
| ತಪಸ್ಸಿನ ಸ್ಥಳ | ಎರಗೋಳ ಗುಹೆ |
| ವಿದ್ಯಾನುಗ್ರಹ | ಭಾರತೀ ದೇವಿ, ಸರಸ್ವತಿ ದೇವಿ, ಶೇಷ ದೇವರು |
| ಆಶ್ರಮ ಶಿಷ್ಯರು | ಶ್ರೀ ವಿದ್ಯಾಧಿರಾಜರು , ಶ್ರೀ ವ್ಯಾಸತೀರ್ಥರು |
| ಸಮಕಾಲೀನರು | ಶ್ರೀ ಅಕ್ಷೋಭ್ಯ ತೀರ್ಥರು, ಶ್ರೀ ವಿದ್ಯಾರಣ್ಯರು, ಶ್ರೀ ವಿಜಯಧ್ವಜ ತೀರ್ಥರು |
| ಅಂಕಿತ | ರಾಮ ವಿಠ್ಠಲ |
| ಬೃಂದಾವನ | ಮಳಖೇಡ, ಗುಲ್ಬರ್ಗ |
| ಆರಾಧನಾ | ಆಷಾಡ ಕೃಷ್ಣ ಪಂಚಮಿ, ವಿಭವ ಸಂವತ್ಸರ, ಕ್ರಿ.ಶ.1388 |
| ಗ್ರಂಥಗಳು | 1. ಪ್ರಮಾಣ ಪದ್ಧತಿ<br>2. ವಾಧಾವಳಿ 3.ಪದ್ಯಮಾಲ<br>4. ಅಧ್ಯಾತ್ಮ ತರಂಗಿಣಿ |
| ಟೀಕೆಗಳು | 1. ತತ್ವಪ್ರಕಾಶಿಕ- ಬ್ರಹ್ಮಸೂತ್ರ ಭಾಷ್ಯ ಟೀಕೆ<br>2. ಶ್ರೀಮನ್ನ್ಯಾಯ ಸುಧಾ -(ಅನುವ್ಯಖ್ಯಾನ ಟೀಕಾ- ಸುಧಾ-ವಿಷಮಪಾದ ವಾಕ್ಯಾರ್ಥ ವಿವೃತ್ತಿ)<br>3. ನ್ಯಾಯ ವಿವರಣಾ ಟೀಕಾ<br>4. ಪ್ರಮೇಯ ದೀಪಿಕಾ - ಗೀತಾಭಾಷ್ಯ ಟೀಕಾ<br>5. ನ್ಯಾಯ ದೀಪಿಕಾ- ಗೀತಾ ತಾತ್ಪರ್ಯ ಟೀಕಾ |

http://madhwatatwa.blogspot.com/2012/07/sri-jayatirtharu.html
https://www.sumadhwaseva.com/yatigalu/others/jayatheertharu/
http://madhwamrutha.org/sri-jayateertharu/



# ಕೊರೋನ

ಮಂಜುಳಾ ಬಾಯಿ

**ಕೊ**ರೋನ ಬಗ್ಗೆ ಸಣ್ಣದೊಂದು ಲೇಖನವನ್ನು ನಿಮ್ಮ ಮುಂದಿಡುವ ಬಯಕೆ. ನಿಮಗೆಲ್ಲ ಹೇಗನಿಸುವುದೋ ನಾನರಿಯೆ. ಅಲ್ಲಮ ಪ್ರಭುಗಳು ಹೇಳಿದ್ದರು, ಶಿವಶರಣರ ವಚನ ಸಾರ್ವಕಾಲಿಕ ಸತ್ಯವಾಯಿತು.

**"ಕಂಡು ಕಂಡುದೆನ್ನಲವ ಕೊಂಡು ಅಟ್ಟಹಾಸದಿ ಮೆರೆವ ಜನಕೆ**
**ಕಾಣದ ಜೀವಿಯು ಬಂದು ತಲ್ಲಣಿಸುವುದು ಜಗವು ನೋಡಾ ಗುಹೇಶ್ವರ".**

ಇದು ತುಂಬಾ ಸತ್ಯವಾದ ಮಾತು. ಜನಗಳಲ್ಲಿ ಸ್ವಾರ್ಥ, ದುರಾಸೆ ತುಂಬಿ ಮಾನವೀಯತೆ ಸತ್ತು ಹೋಗಿತ್ತು. ಇದನ್ನು ಎಚ್ಚರಿಸಲೆಂದೇ ಭಗವಂತ ಜಗತ್ತನ್ನು ಈ ಸ್ಥಿತಿಗೆ ತಂದಿರಬಹುದೇನೋ. ಎಲ್ಲರಿಗೂ ಅನ್ವಯಿಸುವುದಿಲ್ಲ. ಮಹಾತ್ಮರು ಸಜ್ಜನರು ಕೂಡಾ ಇದ್ದಾರೆ. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ. ಅಮಾಯಕರು ಅನುಭವಿಸುವಂತಾಗಿದೆ. ಚೀನಾದಿಂದ ಬಂದ ಈ ಅತಿಥಿ ಜಗತ್ತನ್ನೆ ತಲ್ಲಣಗೊಳಿಸಿದೆ. ದೂರದರ್ಶನ, ಪತ್ರಿಕೆ ಎಲ್ಲ ಕಡೆ ಇದೆ ಸುದ್ದಿ. ಇದರಿಂದ ಸಾವನ್ನು ಅಪ್ಪಿದವರು ಕಡಿಮೆ ಇಲ್ಲ. ಇದು ನಿಗೂಢ ಜೀವಿ ಎಂತು ತಿಳಿಯದೇ ಸಾವಿನ ಕದ ತಟ್ಟಿದವರು ಕೂಡ ತುಂಬಾ ಜನ. ಅಧ್ಯಯನ ನಡೆಸಿದಾಗ ಸ್ವಲ್ಪ ಜಾಗೂರಕರಾಗಿದ್ದಾರೆ ಜನ. ಅದು ಅರಿವು ಮೂಡುವ ಹೊತ್ತಿಗಾಗಲೇ ಸಾಕಷ್ಟು ಸಾವು ನೋವು ಉಂಟಾಗಿದೆ. ನಾವು ನಮ್ಮವರನ್ನು ಕಳೆದುಕೊಂಡಾಗ ಆಗುವ ನೋವು ಹೇಳಲು ಸಾಧ್ಯವಿಲ್ಲ. ಇದರಿಂದ ಇಹಲೋಕ ತ್ಯಜಿಸಿದವರಿಗೆ ನಮ್ಮ ಭಾವ ಪೂರ್ವಕ ಶ್ರದ್ಧಾಂಜಲಿ.
ಜಗತ್ತು ಸೃಷ್ಠಿಯಾದಾಗಿನಿಂದ ಪ್ಲೇಗು, ಸಿಡುಬು ಇನ್ನು ಅನೇಕ ಮಹಾಮಾರಿಗಳು ಜನರನ್ನು ಬಳಿ ತೆಗೆದುಕೊಂಡಿದೆ. ಈಗ ಈ ಕೊರೋನಾ ಸರದಿ. ಮಕ್ಕಳ ಶಾಲೆ ಕುಂಠಿತವಾಯಿತು. ನಕ್ಕು ನಲಿಯುವ ಎಳೆ ಜೀವಗಳ ಆಟ-ಪಾಠಗಳು ನಿಂತು ಹೋದವು. ವಿಧ್ಯಾರ್ಥಿಗಳ ಕಾಲೇಜು ವಿದ್ಯಾಭ್ಯಾಸ ಹಿಂದೆ ಸರಿಯಿತು. ಪ್ರೇಕ್ಷಣೀಯ ಸ್ಥಳಗಳು ಬಿಕೋ ಎಂದವು. ದೇವಸ್ಥಾನಗಳು ಭಕ್ತರಿಲ್ಲದೆ, ಸದ್ದು ಗದ್ದಲವಿಲ್ಲದೆ ನಿಶ್ಯಬ್ದವಾದವು, ಆದ್ಯಾತ್ಮಿಕ ಒಲವು ಇದ್ದವರ ತೀರ್ಥಯಾತ್ರೆಗಳು ನಿಂತು ಹೋದವು. ವಾರಾಂತ್ಯದಲ್ಲಿ ಬಂದು ಬಳಗದವರಿಂದ ನಕ್ಕು ನಲಿಯುತ್ತಿದ್ದ ಮನೆಗಳು ಮಂಕಾದವವು. ಟಿವಿ ಮತ್ತು ಮೊಬೈಲ್‌ಗಳ ಆಸರೆಯಲ್ಲಿ ಕಾಲ ಕಳೆಯುವಂತಾಗಿದೆ. ಆದರೂ ನಾವು ಆಶಾ ಜೀವಿಗಳಾಗಿರೋಣ.

ಏರಿದವನು ಇಳಿಯಬೇಕಲ್ಲವೇ. ಹೇಳತಿಯೊಬ್ಬರು ಹೇಳಿದ್ದರು, "ಕೆಸರು ನೀರು ಸ್ವಲ್ಪ ಹೊತ್ತು ಬಿಟ್ಟರೆ ತಿಳಿಯಾಗುತ್ತದೆ, ಕುಡಿಯುವ ನೀರು ಹಾಗೆ ಬಿಟ್ಟರೆ ಆರುತ್ತದೆ" ಖಂಡಿತಾ ಇದು ಸರಿಹೋಗುತ್ತದೆ. ಧನಾತ್ಮಕ ಚಿಂತನೆಗಳನ್ನು ಮಾಡೋಣ. ಭಕ್ತಿ ಪ್ರಾರ್ಥನೆಯಲ್ಲಿ ನಂಬಿಕೆ ಇಡೋಣ. ಬದುಕಿನಲ್ಲಿ ಸತ್ಯ, ಪ್ರಾಮಾಣಿಕತೆ, ಪ್ರೀತಿ ಬೆಳೆಸಿ ಕೊಳ್ಳೋಣ. ತಂದೆ-ತಾಯಿ ಯವರನ್ನು ಗುರುಹಿರಿಯರನ್ನು ಆದರಿಸೋಣ, ಗೌರವಿಸೋಣ. ಎಲ್ಲರ ಬದುಕಿಗೆ ಅಶಾಂತಿ ತಂದಿರುವ ಈ ಕೊರೋನಾವನ್ನು ಹೆಮ್ಮೆಟ್ಟಿಸು ಎಂದು ಒಟ್ಟಗೆ ಪ್ರಾರ್ಥಿಸೋಣ.

ಪೂಜ್ಯ ಅಬ್ದುಲ್ ಕಲಾಂರವರು ಹೇಳಿದಂತೆ "ನಾವೇ ಅದೃಷ್ಟಶಾಲಿಗಳು ಏಕೆಂದರೆ ನಮ್ಮೊಂದಿಗೆ ದೇವರಿದ್ದಾನೆ" ಎಂದು ದೃಢ ನಿರ್ಧಾರ ಮಾಡೋಣ. ಮೊದಲಿನ ಶಾಂತಿ ನೆಮ್ಮದಿಗಳು ಮತ್ತೆ ಮರಳಿ ಬರಲಿ, ಬಂದೇ ಬರುತ್ತದೆ. ಜಗತ್ತನ್ನು ಬಿಟ್ಟು ಈ ಕೊರೊನಾ ತೊಲಗಲಿ ಎಂದು ಪ್ರಾರ್ಥಿಸೋಣ.

**"ಸರ್ವೇಜನ ಸುಖಿನೋ ಭವಂತು"**

ಮಂಜುಳಾ ಬಾಯಿ
ನಿವೃತ್ತ ಶಾಲಾ ಮುಖ್ಯೋಪಾದ್ಯಾಯರು
ತುಮಕೂರು





# ಮೊಬೈಲ್ ನೆನಪುಗಳು!

*ಪ್ರಶಾಂತ ಎಂ.*



**ಕ**ಳೆದ ವಾರ, ಯುಟ್ಯೂಬ್ ನಲ್ಲಿ " ಟೆಲಿಫೋನ್ ಗೆಳತಿ.... ವೆಲ್ಕಮ್ ವೆಲ್ಕಮ್ ......! ಹಾಡು ಕೇಳ್ತಾ ಇದ್ದಾಗ ಕೆಲವು ನನ್ನ ಹಳೆಯ ಮೊಬೈಲ್ ಫೋನ್ ನೆನಪುಗಳು ಉಕ್ಕಿ ಬಂದು ನಿಮ್ಮ ಜೊತೆಗೆ ಹಂಚಿಕೊಳ್ತಿದ್ದೇನೆ. ೨೦೦೧ರಲ್ಲಿ, ಆಗ ತಾನೆ ಮೆಕ್ಯಾನಿಕಲ್ ಕಂಪನಿ ಕೆಲಸ ಬಿಟ್ಟು ಸಾಫ್ಟವೇರ್ ಕೆಲಸ ಸೇರಿಕೊಂಡಿದ್ದೆ. ಸಪೋರ್ಟ್ ಕೆಲಸವಾಗಿದ್ದರಿಂದ, ತುರ್ತು ಸೇವೆಗೆ ಇರಲಿ ಅಂತ ನನಗೆ ಪೇಜರ್ ಕೊಟ್ಟಿದ್ದರು. (ಒಮ್ಮುಖ ಸಂಪರ್ಕ ಸಾಧನ!) ಪೇಜರ್ ಸಂದೇಶ ಬಂದಾಗ, ಹತ್ತಿರದ ಎಸ್.ಟಿ.ಡಿ ಬೂತ್‌ಗೆ ಓಟ!. ಆಗ ಮೊಬೈಲ್ ಬಳಕೆ ನಿಧಾನವಾಗಿ ಹೆಚ್ಚು ಬೆಳೆಯುತಲಿತ್ತು. ನನಗೂ ತಗೊ ಬೇಕು ಅಂತ ಆಸೆ, ಆದರೆ ಖರೀದಿ ಮಾಡಲು ಬೆಲೆ ದುಬಾರಿ ಮತ್ತು ಅದನ್ನು, ಬರುವ ತಿಂಗಳ ಸಂಬಳದಲ್ಲಿ ಸಂಭಾಳಿಸೋದು ಅಷ್ಟು ಸುಲಭವಾಗಿರಲಿಲ್ಲ.

"ಪ್ಯಾರಗಾನ್ - ರವಿ, ಐ.ಬಿ.ಎಂ- ರವಿ, ಡಿಜಿಟಲ್- ಗಿರಿ, ಆನಿ, ಚೆನ್ನಿ, ಅಶೋಕ, ಬಿಎಫ್ಎಲ್- ಅರುಣ ಮತ್ತು ನಾನು ಸ್ಪಿನ್‌ಸರ್ಕ್ಯುಟ್ ಪ್ರಾಶ್" ಕ್ಲೋಸ್ ಫ್ರೆಂಡ್ಸ್.(ನಮ್ಮ ಗುಂಪಿನಲ್ಲಿ ಇಬ್ಬರು ರವಿ ಇದ್ದಿದ್ದರಿಂದ ಕೆಲಸ ಮಾಡ್ತಿದ್ದ ಕಂಪನಿಯ ಹೆಸರನ್ನು ಉಪಮೇಯವಾಗಿ ಉಪಯೋಗಿಸ್ತಾ ಇದ್ವಿ.) ನಮ್ಮ ಗುಂಪಿನಲ್ಲಿ ಮೊದಲು ಮೊಬೈಲ್ ಫೋನ್ ತಗೊಂಡಿದ್ದು, ಪ್ಯಾರಗಾನ್ ರವಿ ಮತ್ತು ಡಿಜಿಟಲ್ ಗಿರಿ. ಸ್ವಲ್ಪ ತಿಂಗಳ ನಂತರ ಪ್ಯಾರಗನ್ ರವಿ ತನ್ನ ಮೊಬೈಲ್ ಅಪ್‌ಗ್ರೇಡ್ ಮಾಡಿಕೊಂಡು, ನನಗೆ ತನ್ನ ಸಿಮೆನ್ಸ್ ಸಿ-೨೫ ಹ್ಯಾಂಡ್‌ಸೆಟ್ ಮಾರಿದ. ಇದು ಸೆಕೆಂಡ್‌ಹ್ಯಾಂಡ್ ಫೋನ್ ಆದರೂ, ನನ್ನ ಜೀವನದ ಮೊದಲ ಮೊಬೈಲ್ ಫೋನ್!!. ತಗೊಂಡಿದ್ದು ಎಷ್ಟಕ್ಕೆ ಗೊತ್ತಾ? ಆಗಿನ ರೂ.೧೫೦೦೦ ಕ್ಕೆ!. ಪೋಸ್ಟ್‌ಪೇಡ್ ಕನೆಕ್ಷನ್ನು ತಗೊಂಡು, ಪೇಜರ್ ಬದಲಿಗೆ ಕಂಪನಿ ಜೊತೆಗೆ ಒಂದು ಕರಾರು ಮಾಡ್ಕೊಂಡೆ. ಏನಪ್ಪ ಅದು ಅಂದ್ರೆ, ಫೋನ್ ನಂದು, ಆಫೀಸ್ ಕರೆ ಚಾರ್ಜ ಮತ್ತು ತಿಂಗಳ ಫಿಕ್ಸಡ್ ಚಾರ್ಜ್ ಅವರದು. ಇನ್ನು ಯಾವುದಾದ್ರು ವ್ಯಯಕ್ತಿಕ ಕರೆ ಬಂದ್ರೆ ಅದು ನನ್ನ ಜವಾಬ್ದಾರಿ. ಅವಾಗ ಮೊಬೈಲ್ ಕರೆ ದರ ಕಡಿಮೆ ಇರಲಿಲ್ಲ. ಹೊರ ಹೋಗುವ ಕರೆ ರೂ.೩ ಪ್ರತಿ ನಿಮಿಷಕ್ಕೆ. ಒಳ ಬರುವ ಕರೆ ರೂ.೧ (ಆಗಿನ ಸಂಬಳಕ್ಕೆ ಇದು ಸೋವಿ ಅಲ್ಲಾರಿ! ). "ಮಿಸ್‌ಡ್‌ಕಾಲ್" ಉಪಯೋಗ ಶುರುವಾಗಿದ್ದೇ ಈ ಟೈಮ್‌ನಲ್ಲಿ!!.

ಸ್ವಲ್ಪ ತಿಂಗಳ ನಂತರ, ಗೆಳೆಯ ಡಿಜಿಟಲ್ ಗಿರಿಯ ಮದುವೆ ಫಿಕ್ಸ್ ಆಗಿ ನಿಶ್ಚಿತಾರ್ಥ ಆಯಿತು. ಇಷ್ಟೊತ್ತಿಗೆ, ನನ್ನ ಮೊಬೈಲ್ ಪ್ಲಾನ್‌ನಲ್ಲಿ ಸ್ವಲ್ಪ ಬದಲಾವಣೆ ಆಗಿತ್ತು. ಎರಡು ದೂರವಾಣಿ ಸಂಖ್ಯೆಯಿಂದ ಒಳ ಬರುವ ಕರೆಗಳು ಉಚಿತ (ಊರಿನ ನಂಬರ್ ಮತ್ತು ಐ.ಬಿ.ಎಂ ರವಿದ್ದು) !! ಮತ್ತು ಬೇರೆ ಸಂಖ್ಯೆಗಳಿಂದ ಬರುವ ಕರೆಗಳಿಗೆ ರಾತ್ರಿ ೧೦ ಗಂಟೆಯ ಮೇಲೆ ೨೫ ಪೈಸೆ. ಈ ಪ್ಲಾನ್‌ನ ಪೂರ್ತಿ ಪೈಸಾ ವಸೂಲ್ ಮಾಡ್ತಿದ್ವಿ :). ರಾತ್ರಿ ೧೦ ಗಂಟೆ ಆದ ತಕ್ಷಣ, ಗಿರಿ ನನ್ನ ಸಿಮ್ ಕಾರ್ಡನ್ನು ಅವನ ಫೋನಿಗೆ ಹಾಕಿ, ಅವನ ಭಾವೀ ಪತ್ನಿಗೆ ಮಿಸ್ ಕಾಲ್ ಕೊಟ್ಟು ತಾರಸಿಗೆ ಹೋಗ್ತಿದ್ದ. ಆಮೇಲೆ ಅತ್ತ ಕಡೆಯಿಂದ ಒಳ ಕರೆ ಬರೋದು. ಇತ್ತ ನಾವು ರಾತ್ರಿ ಊಟಕ್ಕೆ ಅಡುಗೆ ಶುರು ಮಾಡ್ತಿದ್ವಿ. ಹೆಚ್ಚು ಕಡಿಮೆ ವಾರ ಪೂರ್ತಿ ಚಿತ್ರಾನ್ನ ನಮ್ಮ ರಾತ್ರಿಯ ಊಟ. ಚಿತ್ರಾನ್ನ ರೆಡಿ ಆಗೋಷ್ಟರಲ್ಲಿ ಗಿರಿ ತನ್ನ ಸಂಭಾಷಣೆ ಮುಗಿಸಿ ಕೆಳಗೆ ಬರ್ತಿದ್ದ. ನಮ್ಮ ಇನ್ನೊಬ್ಬ ಗೆಳೆಯ ತಿಪ್ಸ್ ಕೂಡ ನಮ್ಮ ಜೊತೆಗೆ ಚಿತ್ರಾನ್ನದ ಬ್ಯಾಟಿಂಗ್ ಮಾಡಲು ನಮ್ಮನ್ನು ಸೇರುತ್ತಿದ್ದ. ಇವತ್ತಿಗೂ ಗಿರಿಗೆ ಮೊಬೈಲ್ ಕಾಲ್ ಮಾಡಿದಾಗ ಈ ನೆನಪು ಬರುತ್ತದೆ. ಮತ್ತು ಮನೆಯಲ್ಲಿ ಚಿತ್ರಾನ್ನ ಮಾಡಿದಾಗ ವಾಟ್ಸ್‌ಪ್ ಗ್ರೂಪ್ನಲ್ಲಿ ಶೇರ್ ಮಾಡ್ತೀವಿ- ಚಿತ್ರಾನ್ನದ ಫೋಟೊವನ್ನು!

ಇನ್ನು ರವಿ ನಂಬರ್ನಿಂದ ಬರುವ ಕರೆಗಳು ಉಚಿತ. ಇವನ ನಂಬರ್ ನೊಂದಣಿ ಮಾಡಲು ಕಾರಣ, ಅವನು ನನ್ನ ಕೈನೆಟಿಕ್ ಹೊಂಡಾದ ಪ್ಯಾಸೆಂಜರ್ :). ಇಬ್ರೂ ಜೊತೆ-ಜೊತೆಗೆಯಾಗಿ ಕೆಲಸಕ್ಕೆ ವಿಜಯನಗರದಿಂದ ಹಳೆಯ ಏರ್ಪೋರ್ಟ್ ರೋಡ್‌ಗೆ ಪ್ರತಿದಿವಸ ದಂಡಯಾತ್ರೆ ಮಾಡ್ತಿದ್ವಿ. ಒಂದು ಸಲ ನಾನು ಚಿಕ್ಕಪೇಟೆಯಲ್ಲಿ ರವಿಗೆ ಕಾಯ್ತಾ ಇದ್ದೆ. ಅವನು ಸಾಗರ್ ಥಿಯೇಟರ ಕಡೆಯಿಂದ ಶುರು ಮಾಡಿ, ನನ್ನನ್ನು ಸೇರೋ ತನಕ ಮಾತಾಡ್ತನೇ ಬಂದ. ಆ ದಿನಗಳಲ್ಲಿ ಯಾರಾದ್ರು ೨ ನಿಮಿಷಕ್ಕಿಂತ ಜಾಸ್ತಿ ಮೊಬೈಲ್ ಉಪಯೋಗಿಸಿದರೆ, ಅವರನ್ನು ದುಡ್ಡಿರೊ ಮನುಷ್ಯ ಅಂತ ನೋಡ್ತಿದ್ರು. ಆದ್ರೆ ನಮಗೆ ಫ್ರೀ ಇದ್ದಿದ್ದರಿಂದ, ಸುಮ್ನೆ ಮಾತಾಡ್ತಾನೇ ಇದ್ವಿ.

ನಮ್ಮ ಇನ್ನೊಬ್ಬ ಗೆಳೆಯ ಮನೋಜ್, ತನ್ನ ಭಾವೀ ಪತ್ನಿಗೆ ನಿಶ್ಚಿತಾರ್ಥ ಉಡುಗೊರೆಯಾಗಿ ಮೊಬೈಲ್ ಫೋನ್ ಕೊಟ್ಟ. ಮೊಬೈಲ್ ಏನೋ ಕೊಟ್ಟ, ಆದ್ರೆ ತಿಂಗಳ ಬಿಲ್ ಕಟ್ಟೋರು ಯಾರು?. ಅದಕ್ಕೆ ಅವನ ಭಾವೀ ಹೆಂಡತಿ, ಅವನಿಗೆ ಪ್ರೀತಿಯಿಂದ ನೀವೇ ಉಪಯೋಗಿಸಿಕೊಳ್ಳಿ ಅಂತ ವಾಪಸು ಕೊಟ್ರು. ನಾವು ಎಡಗೈಯಲ್ಲಿ ಕೋಡುವುದು ಬಲಗೈಗೆ ಗೊತ್ತಗಬಾರದು ಅಂತ ಗಾದೆ ಕೇಳಿದ್ವಿ. ಆದ್ರೆ ನಮ್ಮ ಮನೋಜ ಅದನ್ನು, ಎಡಗೈಯಿಂದ ಕೊಡು, ಬಲಗೈಯಿಂದ ಇಸಕೊ ಅಂತ ಚೇಂಜ್ ಮಾಡ್ಬಿಟ್ಟ!!. ಆವತ್ತಿನಿಂದ ನಾವು ಏನಾದ್ರೂ ಉಡುಗೊರೆ ಕೊಡಬೇಕಾದ್ರೆ, ಇವನನ್ನು ನೆನಪಿಸಿಕೊಳ್ತೇವೆ!!. ನೀವೂ ಕೂಡ ಇದರ ಬಗ್ಗೆ ಯೋಚಿಸಿ!

ಇವತ್ತು ನನ್ನೆಲ್ಲಾ ಸ್ನೇಹಿತರು ಬೇರೆ ಬೇರೆ ದೇಶಗಳಲ್ಲಿ ಇದ್ರೂ, ನಮ್ಮ ಗೆಳೆತನದ ನೆನಪುಗಳು ಸದಾ ನಮ್ಮ ಜೊತೆ ಇವೆ!..ಜುಲೈ ೩೦ ಅಂತರಾಷ್ಟ್ರೀಯ ಗೆಳೆಯರ ದಿನಾಚರಣೆ ದಿನ. ಈ ಸಮಯದಲ್ಲಿ ಈ ನೆನಪುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳೋಕ್ಕೆ ಒಂಥಾರ ಖುಷಿ ಆಗ್ತಾ ಇದೆ!.



# ರಂಗೋಲಿಯ ಮಹತ್ವ!

ವಿನೋದ ಸಿಂಗನಮಲ್ಲಿ

**ರಂ**ಗೋಲಿಯನ್ನು ರಂಗವಲಿ, ರಂಗೋಲಿ, ರಂಗಾವಲಿ ಎಂದು ವಿವಿಧ ನಾಮಗಳಿಂದ ಕರೆಯುತ್ತಾರೆ. ರಂಗ + ವಲಿ = ರಂಗವಲಿ. ಯಾವುದರಿಂದ ಭಗವಂತನಾದ ರಂಗ ಒಲಿಯುವನೋ ಅದೇ ರಂಗೋಲಿ. ಭಗವಂತನ ಪ್ರೀತಿಗಾಗಿ, ಅವನನ್ನು ಒಲಿಸಿಕೊಳ್ಳಲು ಹಾಕುವದೇ ರಂಗೋಲಿ. ಶ್ರೀಜಗನ್ನಾಥದಾಸರು ರಂಗೋಲಿ ಹಾಕಿ ಶ್ರೀರಂಗನನ್ನು ಒಲಿಸಿಕೊಂಡಿದ್ದರು ಅದಕ್ಕಾಗಿಯೇ ಅವರನ್ನು ರಂಗ ಒಲಿದ ದಾಸರು ಅಂತ ಕರೆಯುತ್ತಿದ್ದರು. ಈಗಲೂ ಮಾನ್ವಿಯಲ್ಲಿ ಅವರ ರಂಗೋಲಿಗಳನ್ನು ನೋಡಬಹುದು.

ಗೃಹಿಣಿಯರ ಮನೆಯ ಕೆಲಸ ಶುರುವಾಗುವದೇ ಮನೆಯ ಅಂಗಳದ ರಂಗೋಲಿಯಿಂದ. ದಿನವೂ ಹಾಕುವ ರಂಗೋಲಿಗಳು, ವಾರದ ರಂಗೋಲಿ, ಹಬ್ಬದ ರಂಗೋಲಿ, ಹಸೆಗೆ ಹಾಕುವ ರಂಗೋಲಿ, ಹೋಮ ಹವನ ಮಾಡುವಾಗ ಹಾಕುವ ರಂಗೋಲಿ ಹೀಗೆ ವಿವಿಧ ಬಗೆಯ ರಂಗೋಲಿಗಳಿವೆ. ಆಯಾ ಆಚರಣೆಗೆ ಸಂಬಂಧಿಸಿದ ರಂಗೋಲಿಯನ್ನು ಹಾಕುವದರಿಂದ ಆಯಾ ದೇವತೆಗಳಿಗೆ ತೃಪ್ತಿಯಾಗಿ ದೈವೀ ಶಕ್ತಿಯು ಅಧಿಕವಾಗುವುದು. ರಂಗೋಲಿಗೆ ಬಣ್ಣಗಳನ್ನು ತುಂಬುವದರಿಂದ ಆಯಾ ಬಣ್ಣದಲ್ಲಿ ಇರುವ ನವಗ್ರಹದೇವತೆ ಪ್ರೀತರಾಗುತ್ತಾರೆ. ಅಂಗಳದಲ್ಲಿ ರಂಗೋಲಿ ಇರುವ ಮನೆಗೆ ಲಕ್ಷ್ಮೀ ನಾರಾಯಣರು ಬಂದು ನೆಲೆಸುತ್ತಾರೆ.

ಶ್ರಾವಣಮಾಸ ಶುರುವಾಗುವುದೇ ಹಬ್ಬಗಳ ಸಾಲಿನಿಂದ. ಹಬ್ಬದ ಸಡಗರ ಶುರುವಾಗುವದೇ ಮನೆಯ ಮುಂದಿನ ಅಂಗಳದ ರಂಗೋಲಿ, ಮಾವಿನಸೊಪ್ಪಿನ ತೋರಣ, ಮಲ್ಲಿಗೆ ಹೂವಿನ ಪರಿಮಳದಿಂದ. ಎಲ್ಲರ ಮನೆಯ ರಂಗೋಲಿಯನ್ನು ನೋಡಲು ಎರಡು ಕಣ್ಣು ಸಾಲದು. ಮನೆಯ ಒಳಗಡೆ ಅಡುಗೆ ಏನಾದ್ರೂ ಮಾಡಿ ಅಂಗಳದ ರಂಗೋಲಿ ದೊಡ್ಡದಾಗಿದ್ರೆ ಸಾಕು, ಅಕ್ಕ ಪಕ್ಕದ ಮನೆಯವರೇ ಹೇಳ್ತಾರೆ, ನಿಮ್ಮನೇಲಿ ಹಬ್ಬ ಜೋರಾಗಿದೆ ಅಂತ!.

ರಂಗೋಲಿ ಇಲ್ಲದವರ ಮನೆಗೆ ಭಿಕ್ಷುಕರೂ ಬರುವದಿಲ್ಲ. ಮನೆಯಮುಂದೆ ರಂಗೋಲಿ ಇಲ್ಲಾ ಅಂದರೆ ಅವರ ಮನೆಯಲ್ಲಿ ಏನೋ ಅನಾಹುತ ಆಗಿದೆ ಅಂತ ಅರ್ಥ. ಮನೆಯಲ್ಲಿ ಯಾರಾದರೂ ತೀರಿಕೊಂಡಿದ್ದರೆ, ಶ್ರಾದ್ಧ ತಿಥಿ ಇದ್ದರೆ, ಅಂಥವರ ಮನೆಯ ಮುಂದೆ ರಂಗೋಲಿ ಇರುವುದಿಲ್ಲ.

ಹೆಣ್ಣುಮಕ್ಕಳು ಸೂರ್ಯೋದಯಕ್ಕೆ ಮೊದಲು ಎದ್ದು ಮನೆಯ ಮುಂದಿನ ಅಂಗಳವನ್ನು ಗುಡಿಸಿ, ನೀರಿನಲ್ಲಿ ಗೋಮಯ ಸೇರಿಸಿ / ಅರಿಶಿಣ ಸೇರಿಸಿ ಅಂಗಳ ಮತ್ತು ಹೊಸ್ತಿಲನ್ನು ತೊಳೆಯುವದರಿಂದ ಕ್ರಿಮಿ ಕೀಟಗಳು ಮನೆಯ ಹತ್ತಿರ ಬರುವುದಿಲ್ಲ. ರಂಗೋಲಿ ಹಾಕುವಾಗ ಬಲಗಡೆಯ ಕೈಯಲ್ಲಿರುವ ತೋರು ಬೆರಳಿನ ತುದಿಯನ್ನು ಹೆಬ್ಬೆರಳು ಮೃದುವಾಗಿ ಒತ್ತುವದರಿಂದ ದೇಹದಲ್ಲಿ ಸಕಾರಾತ್ಮಕ ಶಕ್ತಿ ವೃದ್ಧಿಯಾಗುವದಲ್ಲದೇ ದೇಹದಲ್ಲಿ ರಕ್ತಪರಿಚಲನೆ ಸರಿಯಾಗಿ ಆಗಿ ದಿನವಿಡೀ ಉತ್ಸಾಹದಿಂದ ಕೆಲಸಮಾಡಲು ಸಹಾಯವಾಗುತ್ತದೆ ಎಂದು ಯೋಗಶಾಸ್ತ್ರ ಹೇಳುತ್ತದೆ. ಬಗ್ಗಿ ರಂಗೋಲಿ ಹಾಕುವದರಿಂದ ಹೊಟ್ಟೆಗೆ ವ್ಯಾಯಾಮವಾಗಿ ಹೊಟ್ಟೆಯ ಬೊಜ್ಜು ಕರಗುತ್ತದೆ. ರಂಗೋಲಿಯಲ್ಲಿರುವ ಅಡ್ಡ, ಉದ್ದ, ವಕ್ರರೇಖೆಗಳಿಂದ ಕಣ್ಣಿನದೃಷ್ಟಿ ದೋಷ, ಮಾನಸಿಕ ತೊಂದರೆಗಳು ನಿವಾರಣೆಯಾಗುತ್ತವೆ.

ಅಂಗಳಕ್ಕೆ ಗೋಮಯ / ಅರಿಶಿಣದ ನೀರುಹಾಕಿದಾಗ ಭೂದೇವಿಯ ಸನ್ನಿಧಾನ ಹೆಚ್ಚಾಗುತ್ತದೆ, ಬಿಳಿಯ ರಂಗೋಲಿ ಪುಡಿಯಿಂದ ರಂಗವಲ್ಲಿ ಬಿಡಿಸಿದಾಗ ಅಲ್ಲಿ ಶ್ರೀದೇವಿಯ ಸನ್ನಿಧಾನ ಬರುತ್ತದೆ. ಕೆಮ್ಮಣ್ಣಿನಿಂದ ಅಲಂಕರಿಸಿದಾಗ ಅಲ್ಲಿ ದುರ್ಗಾದೇವಿಯ ಸನ್ನಿಧಾನ ಬರುತ್ತದೆ. ಶ್ರೀ ಭೂ ದುರ್ಗಾ ದೇವಿಯರ ಸನ್ನಿಧಾನ ಮನೆಯ ಅಂಗಳಕ್ಕೆ ಬಂದಾಗ ದುಷ್ಟ ಶಕ್ತಿಗಳು ಮನೆಯ ಹತ್ತಿರ ಸುಳಿಯುವದಿಲ್ಲಾ. ಧನಾತ್ಮಕ ಶಕ್ತಿಯ ವೃದ್ಧಿ ಆಗುತ್ತದೆ. ಆದ್ದರಿಂದ ನಾವು ಪ್ರತಿದಿನ ಬೆಳಿಗ್ಗೆ ಮನೆಯ ಅಂಗಳದಲ್ಲಿ ರಂಗೋಲಿಯನ್ನು ಹಾಕಿ ನಮ್ಮ ಮನೆಯಲ್ಲಿ ಧನಾತ್ಮಕ ಶಕ್ತಿ ಹೆಚ್ಚಾಗುವಂತೆ ಮಾಡಿ, ಲಕ್ಷ್ಮೀಸಹಿತ ಶ್ರೀರಂಗನಾಥ ನಮ್ಮ ಮನೆಗೆ ಬಂದು ನೆಲೆಸುವಂತೆ ಮಾಡೋಣ

**ಶ್ರೀಕೃಷ್ಣಾರ್ಪಣಮಸ್ತು.**








# ಹಾಲ್ ಕೋವ

ಪಲ್ಲವಿ ಮಂಜುನಾಥ

ಪದಾರ್ಥಗಳು:

1. ಮೈದಾ ( 1 ಕಪ್),
2. ಸಕ್ಕರೆ ( 1 ಕಪ್) ಪುಡಿ,
3. ತುಪ್ಪ (1/2 ಕಪ್),
4. ಅಡುಗೆ ಎಣ್ಣೆ (1/4 ಕಪ್),
5. ಏಲಕ್ಕಿ ಪುಡಿ.



ಪಾತ್ರೆಗೆ ತುಪ್ಪ ಮತ್ತು ಎಣ್ಣೆ ಹಾಕಿ ಬಿಸಿ ಮಾಡಿ ನಂತರ ಮೈದಾ ಹಿಟ್ಟನ್ನು ಘಮ ಬರುವವರೆಗು ಹುರಿಯಬೇಕು. ಸ್ಟವ್ ಆರಿಸಿ ಹುರಿದ ಹಿಟ್ಟನ್ನು ತಣ್ಣಗಾಗಲು ಬಿಟ್ಟು ಅದಕ್ಕೆ ಸಕ್ಕರೆ, ಏಲಕ್ಕಿ ಪುಡಿಯನ್ನ ಮೈದಾ ಹಿಟ್ಟಿನೊಂದಿಗ ಬೆರೆಸಿ ಕೈ ಇಂದ ಚೆನ್ನಾಗಿ ಕಲಸಬೇಕು. ನಂತರ ಒಂದು ಘಂಟೆ fridge ನಲ್ಲಿ ಇಟ್ಟು, ಬೇಕಾದ ಆಕಾರಕ್ಕೆ ಕತ್ತರಿಸಿ ಸವಿಯಬಹುದು.



# ಖರ್ಜೂರದ ಹೋಳಿಗೆ

ಪ್ರೀತಿ ಶಿವಯೋಗಿ

ನಮಸ್ಕಾರಗಳು.

ನಾನು ಪ್ರೀತಿ ಶಿವಯೋಗಿ , ಮಸ್ಕಟ್ ( ಓಮನ) ದೇಶದಲ್ಲಿ ಸುಮಾರು 12 ವರ್ಷದಿಂದ ನೆಲೆಸಿದ್ದೇನೆ.

ಓಮನ ನೆಲದ ಹಾಗು ಇಲ್ಲಿಯ ಮೂಲ ಸಂಪನ್ಮೂಲದ ಬಗ್ಗೆ ನನಗೆ ವಿಶೇಷ ಪ್ರೀತಿ ಮತ್ತು ಅಭಿಮಾನ. ಅದರಲ್ಲಿಯೂ ಖರ್ಜೂರದಲ್ಲಿ ಅಡಗಿದ ಆರೋಗ್ಯದ ಗುಟ್ಟು ನೂರಾರು. ಅದರಲ್ಲಿ Iron, Phosphorus, zinc, calcium, potassium, fiber etc. ಹೇರಳವಾಗಿದೆ. ಮಹಿಳೆಯರಲ್ಲಿ ಕಾಡುವ ಮಂಡಿ ನೋವು ಮತ್ತು ಗರ್ಭಿಣಿಯರಲ್ಲಿ ಕಬ್ಬಿಣನಾಂಶ ಕೊರತೆ ಮತ್ತು ಮಕ್ಕಳಲ್ಲಿಯ ನೆನಪಿನ ಶಕ್ತಿ ಕೊರತೆ ಇನ್ನೂ ಹತ್ತು ಹಲವು ಕೊರತೆಗಳಿಗೆ ಒಂದೇ ಪರಿಹಾರ ಈ ಖರ್ಜೂರ ರಾಮಬಾಣ. ಇದನ್ನು ದಿನಾಲು ಸೇವಿಸಬೇಕು.



ಬೇಕಾಗುವ ಪದಾರ್ಥಗಳು:

1) ಖರ್ಜೂರ 2 cup ( ಬೀಜ ತೆಗೆದು).
2) ಮೈದಾ  2 cup
3) ಸಕ್ಕರೆ ಪುಡಿ 1/2 cup.
4) ಏಲಕ್ಕಿ  3-4.
5) ಬೇಯಿಸಲು ಎಣ್ಣೆ ಸ್ವಲ್ಪ.

ವಿಧಾನ :-

ಒಂದು ತಾಸು ಮೊದಲು ಮೈದಾ  ಹಿಟ್ಟಿಗೆ 1 tsp ಎಣ್ಣೆ ಹಾಕಿ ನೀರಿನಿಂದ ಕಲಸಿ ಇಡಿ.

ನಂತರ ಹೂರಣಕ್ಕೆ ತಯಾರಿ:-

ಖರ್ಜೂರವನ್ನು ಸಕ್ಕರೆ ಪುಡಿ, ಏಲಕ್ಕಿ  ಪುಡಿಯನ್ನು ಮಿಕ್ಸಿಯಲ್ಲಿ paste ಮಾಡಿ.

ನಂತರ ನಾದಿ ಇಟ್ಟುಕೊಂಡ ಹಿಟ್ಟನ್ನು ಪೂರಿ  ಗಾತ್ರದ size ತೆಗೆದುಕೊಂಡು ಸ್ವಲ್ಪ ಲಟ್ಟಿಸಿ ಅದರಲ್ಲಿ ಹೂರಣ ತುಂಬಿ ಮತ್ತೆ ಲಟ್ಟಿಸಿ , ಕಾದ ತವಾದಲ್ಲಿ ಸ್ವಲ್ಪ ಎಣ್ಣೆ ಸವರಿ ಎರಡು ಬದಿ ಬೇಯಿಸಬೇಕು.

ಆಹಾ...!!! ಎಂಥ ರುಚಿ.



# ಐಸ್ ಕ್ರೀಮ್

*ರಚ್ ನಾ ಆಚಾರ್ಯ*

**ವೆನಿಲ್ಲಾ ಮಿಂಟ್ ಚಾಕ್ಲೇಟ್ ಚಿಪ್ ಐಸ್ಕ್ರೀಮ್**

ಪದಾರ್ಥಗಳು:

2 ಕಪ್ 2% ಹಾಲು

2 ಕಪ್ ದಪ್ಪ ಕ್ರೀಮ್

1/4 ಟೀ ಚಮಚ ಉಪ್ಪು

1 ಟೀ ಚಮಚ ವೆನಿಲ್ಲಾ ಎಸೆನ್ಸ್

1 ಟೀ ಚಮಚ ಪೆಪ್ಪರ್ಮಿಂಟ್ ಎಸೆನ್ಸ್

ಇವೆಲ್ಲವನ್ನು ನಿಧಾನವಾಗಿ ಬೆರೆಸಿ. ಈಗ 1 ಕಪ್ ಚಾಕ್ಲೆಟ್ ತುಂಡುಗಳನ್ನು ಹಾಕಿ ಫ್ರೀಜ್ ಮಾಡಿ!!

ಮಸ್ತ್ ಮಜಾ ಮಾಡಿ!



**ಸುಲಭ ಮಾವಿನಹಣ್ಣಿನ ಐಸ್ಕ್ರೀಮ್**

ಪದಾರ್ಥಗಳು:

1 ಕ್ಯಾನ್ ಮಾವಿನಹಣ್ಣಿನ ಪಲ್ಪ್ (1 lb.14 oz)

1 ಕ್ಯಾನ್ ಕಂಡೆನ್ಸ್ಡ್ ಹಾಲು (14 fl.oz)

1 ಕ್ಯಾನ್ ಇವಾಪೋರೇಟೆಡ್ ಹಾಲು(12 fl.oz)

1 ಕಪ್ 2%ಹಾಲು

ಇವೆಲ್ಲವನ್ನು ಬೆರೆಸಿ. ಫ್ರೀಜ್ ಮಾಡಿ.



ಮಸ್ತ್ ಮಜಾ ಮಾಡಿ!



# "ಹಿತ್ತಲಗಿಡ" ಕಲಾಕೃತಿ

*ಪ್ರಶಾಂತ ಎಂ.*

ಬೃಂದಾವನ ಗಾರ್ಡನ್ ವಾಟ್ಸಾಪ್ ತಂಡದ ಸದಸ್ಯರು ತಮ್ಮ ಹಿತ್ತಲಿನಲ್ಲಿ ಬೆಳೆದ ಹೂ ಮತ್ತು ತರಕಾರಿಗಳಿಂದ ಮೂಡಿಬಂದ ಕಲಾಕೃತಿ !.ನಿಮಗೆ ಇಷ್ಟವಾದರೆ ಒಂದು ಲೈಕ್ ಕೊಡಿ !!





# ಗೆಳೆತನ

ಶ್ರೀವಿದ್ಯಾ ಪ್ರಶಾಂತ್

ನಿಸ್ವಾರ್ಥ ಪ್ರೀತಿಯ ಬಂಧ
ಗೆಳೆತನವೆಂಬ ಅಮೋಘ ಸಂಬಂಧ
ಸುಖ-ದು:ಖವ ಹಂಚಲು
ನೋವ-ನಲಿವಲಿ ಕಳೆಯಲು
ಸುಳ್ಳು-ಸತ್ಯಗಳ ನಡುವೆ
ತರಲೆ-ಕಾಳಜಿಯ ಬೆಸುಗೆ
ಕನಸುಗಳಿಗೆ ಸ್ಫೂರ್ತಿಯಾಗಿ
ನೊಂದ ಮನಸ್ಸಿಗೆ ನವಚೇತನವಾಗಿ
ಬದುಕಿನ ಆಶಾಕಿರಣವಾಗಿ
ಬಾಳ ಪಯಣದಿ ಜೊತೆಯಾಗಿ
ಬಾಡದ ಹೂವಂತೆ ಸದಾ ಹಸಿರಾಗಿ
ಅಮರವೀ ಸ್ನೇಹ- ಚಿರನೂತನವೀ ಆತ್ಮೀಯ ಭಾವ..





# ಸ್ವಾತಂತ್ರ್ಯ

*ಮಾನಸ ನಟರಾಜ್*



*ಶ್ರೀ ವರ್ಣಿಕ ಫಣೆಂದ್ರ*

ಬಂದಿತು ಬಂದಿತು ಸ್ವಾತಂತ್ರ್ಯದ  ದಿನ
ಮುಗಿಯಿತು ನಮ್ಮಯ ಕರಾಳ ದಿನ
ಹರಿಸಿತು ನಮ್ಮಲಿ ಹರುಷದ ಹೊನಲು
"ಭರತ್ ಮಾತಾ ಕಿ ಜೈ!!! " ಎಂಬ ಕೂಗು ಮುಟ್ಟಿತು ಮುಗಿಲು
ಬನ್ನಿ ತಿಳಿಯೋಣ ಅದರ ಹಿಂದಿನ ಕಥೆ
ಹೋರಾಟಗಾರರ ಬಲಿದಾನದ ವ್ಯಥೆ

ಅಟ್ಟಹಾಸದಿ ಮೆರೆಯುತ್ತಿದ್ದರು  ಬ್ರಿಟೀಷರು
ನೋವಿನಲ್ಲಿ ನರಳಾಡುತ್ತಿದ್ದರು ಭಾರತೀಯರು
ಒಡೆದು ಆಳುವ ನೀತಿ  ಅನುಸರಿಸಿದರು ಅವರು
ಒಗ್ಗಟಿನಲ್ಲಿ ಗೆಲ್ಲುವ ನೀತಿ ಅನುಸರಿಸಿದರು ನಮ್ಮವರು

ನಡೆಯಿತು ಅದೆಷ್ಟೋ ಸಭೆಗಳು
ಜನರನ್ನು ಒಗ್ಗೂಡಿಸುವ ಪ್ರಯತ್ನಗಳು
ಲೆಕ್ಕವಿರದಷ್ಟು ಬಲಿದಾನ, ಹತ್ಯಾಕಾಂಡಗಳು
ಸುಂಕದ ಹೆಸರಲ್ಲಿ ಹಸಿದ ಹೊಟ್ಟೆಯ ಮೇಲೆ ಬರೆಗಳು
ಬ್ರಿಟೀಷರ ವಿರುದ್ಧ ಧನಿ ಎತ್ತಿದವರ ಮೇಲೆ ಛಡಿ ಏಟುಗಳು, ಗುಂಡಿನ ದಾಳಿಗಳು

ನೀಡಿದರು ನರಕ ಯಾತನೆ, ಅಗ್ಗದ ಅರಸನಿಗೆ ಜಗ್ಗಲಿಲ್ಲ
ಭಾರತಾಂಬೆಯನ್ನು  ಸ್ವತಂತ್ರ ಗೊಳಿಸುವ ಛಲವನ್ನ ಬಿಡಲಿಲ್ಲ

ಅನುಸರಿಸಿದರು ಶಾಂತಿಯ ಮಾರ್ಗ, ಒಗ್ಗಟಿನಲ್ಲೇ ಗಳಿಸಿದರು ಜಯವನ್ನ
ಹಾರಿಸಿದರು ಸ್ವತಂತ್ರ ಭಾರತದ ತಿರಂಗ ಧ್ವಜವನ್ನ !!!



# *ಕಲಾಚತುರೆಗೆ ಭಾವ ನಮನ*

*ನಾಗರಾಜ ರಾವ್*



ನಾಡೋಜ ಖ್ಯಾತಿಯ "ಸುಭದ್ರಮ್ಮ" ಕನ್ನಡ ಹೃದಯಸ್ಪರ್ಶಿ
ಗವಾಯಿಗಳ ಗರಡಿಯಲಿ ಪಳಗಿದ ಸ್ವರ ಮಾಧುರ್ಯದರಸಿ ॥ ೧ ॥

ಬಾಲ್ಯದಿಂದಲೇ ರಂಗಾರಾಧನೆ ಮನೆಯಿಂದಲೇ ಪ್ರಚೋದನೆ
ಗಟ್ಟಿಯಾಯ್ತು ಕರ್ಮಭೂಮಿ ಮೆಟ್ಟಲು ಗುರುತರ ಸಾಧನೆ ॥ ೨ ॥

ನಾಟಕ ಸಾಹಿತ್ಯದ ಅಸ್ಖಲಿತ ಲಹರಿ ಮಾತುಗಾರ್ತಿ
ಇಳಿ ವಯಸ್ಸಿನ ತಡೆಗೂ ಜಗ್ಗದ ಅಪರೂಪದ ವಾಚಕಿ ॥ ೩ ॥

ಹರಿದಾಸರ ಪದಗಳ ಭಾವ ಮೆರೆದ ಶಿಸ್ತಿನ ಅರಗಿಣಿ
ಅಕ್ಕಮಹಾದೇವಿ ಶರಣರ ವಚನಗಳಿಗೆ ಚೊಕ್ಕಾದ ಧ್ವನಿ ॥ ೪ ॥

ಮಹಾಭಾರತ ಚರಿತ್ರೆ ಸಾಮಾಜಿಕ ನಾನಾ ಪ್ರಾಕಾರ
ಪಾತ್ರದ ಭಾವಗಳಿಗೆ ಜೀವವಿತ್ತ ನಾರಿಗೆ ರಸಿಕಮನಗಳ ಹರ್ಷೋದ್ಗಾರ ॥ ೫ ॥

ಪರಿಶ್ರಮದಿ ಹೇಮರಡ್ಡಿ ಮಲ್ಲಮ್ಮನ ಮೆರೆಸಿದಾಕಿ
ಅಪ್ರತಿಮ ಅಭಿನೇತ್ರಿ ಗಳಿಸಿದಳು ಅಪಾರ ಪ್ರೀತಿ ॥ ೬ ॥

ಅರ್ಧಶತಮಾನದ ಬಣ್ಣದ ಬದುಕು ಸಾವಿರಾರು ಯಶಸ್ವೀ ನಾಟಕಗಳು
ಗುಬ್ಬಿವೀರಣ್ಣ, ರಾಜ್ಯೋತ್ಸವ, 'ಅಕ್ಕ ' ಸಂಭ್ರಮದ ದೇಶ ವಿದೇಶದ ಪುರಸ್ಕಾರಗಳು ॥ ೭ ॥

ಪರಲೋಕದ ಕಲಾದೇವಿಯ ಆಮಂತ್ರಣಕೆ ನಡೆದಾಕಿ
ಸಾರ್ಥಕ ಬದುಕಿಗೆ ತಾಯ್ನಾಡ ನಿಷ್ಠೆ ಸೂಚಿಸಿದಾಕೆಗೆ ಭಾವ ನಮನ ॥ ೮ ॥

*ಇತ್ತೀಚೆಗೆ ನಮ್ಮನ್ನಗಲಿದ ನಾಡಿನ ಹೆಸರಾಂತ ರಂಗಕರ್ಮಿ ನಾಡೋಜ ಡಾ. ಸುಭದ್ರಮ್ಮ ಮನ್ಸೂರು ಅವರಿಗೆ ಭಾವನಮನ ಈ ಕವನದ ಮುಖಾಂತರ ಸಲ್ಲಿಸಲಾಗಿದೆ. ಅವರ ಸಾಧನೆ, ಆತ್ಮ ಚರಿತ್ರೆ ,ಪ್ರಶಂಶೆಗಳನ್ನೂ ಒಳಗೊಂಡ ಬಾವದ ಚಿತ್ರಣವಿದೆ. ಅಂತರ್ಜಾಲ ದಿಂದಲು ಮತ್ತು ಹತ್ತಿರದಿಂದ ನೋಡಿ ಬಲ್ಲವರ ಒಡನಾಟದಿಂದ ಮಾಹಿತಿಗಳು ಸಂಗ್ರಹವಾಗಿವೆ.*

# ಮನೆಯ ಬಾಗಿಲು



*ಸತೀಶ್ ಹುಳಿಯಾರ್*



ಮನೆಯ ಬಾಗಿಲನು ಸದಾ ತೆರೆದಿರು .
ಮನಸು ಹೇಳುವುದು ಯಾರೋ ಬರುವರೆಂದು.

ಹೇಳದೆ ಬರುವವರು ಎಂದೂ ನಮ್ಮವರು .
ಕೇಳಿಕೊಂಡು ಮನೆಗೆ ಬರುವವರು ದೂರದವರು .
ದೂರದಿಂದ ಬಂದವರು ದಣಿದು ಬಂದಿಹರು .
ಹೇಗಿರುವೆ ನೀ ಎಂದು ಕೇಳಲು ಕಾದಿಹರು .

ಬರಿಗೈಲಿ ಬಂದು ಬಾಗಿಲ ಬಳಿ ನಿಂತಿಹರು.
ಮುಚ್ಚಿದ ಬಾಗಿಲ ಕಂಡು ಹಿಂದೆ ತಿರುಗಿಹರು.
ಒಳಗಿನ ದನಿ ಕೇಳಿ ಆಸೆಯಿಂದ ಕಾದಿಹರು.
ಬಾಗಿಲ ಬಡಿಯಲು ಕೊಂಚ ಹಿಂಜರಿದಿಹರು.

ಏನೂ ಮಾಡಲು ಅರಿಯದೆ ಮುನ್ನಡೆದರು.
ಆಸೆಯಿಂದ ಒಮ್ಮೆ ತಿರುಗಿ ನೋಡಿದರು .
ತೆರೆದ ಬಾಗಿಲ ಕಂಡು ಸಂತಸದಿ ಒಳ ಬಂದರು.
ಏನೂ ಮಾತಾಡದೆ ಮೌನದಿಂದ ಹರಸಿದರು.

ಬಾಗಿಲು ತೆಗೆದಿದೆ ಎಂದು ಯಾರೂ ಬಾರರು.
ಮನಸು ತೆರೆದಿದ್ದರೆ ಸಾಕು ಎಲ್ಲಾ ಬರುವರು.
ಆದರೆ ಮನೆಯ ಬಾಗಿಲನು ಸದಾ ತೆರೆದಿರು .
ಮನಸಿನ ಬಾಗಿಲನು ಎಂದೂ ಮುಚ್ಚದಿರು .



# ಕವನ ಗುಚ್ಛ

ಎಂ.ವಿ.ಸತ್ಯನಾರಾಯಣರಾವ್

## !!ವಾಕಿಂಗ್!!

ಮೈ ಕರಗಿಸಲು ಮಾಡುವರು
ಮಾರ್ನಿಂಗು ಇವ್ನಿಂಗು ವಾಕು
ಜೊತೆ ಜೊತೆಗೆ ಸಾಗುವರು
ಆಡುತ್ತ ಆಡುತ್ತಾ ಅವರಿವರ ಟಾಕು!

ಬಟ್ಟೆಯಾ ಒಗೆಯಲು ವಾಷಿಂಗು ಯಂತ್ರ
ಹಿಟ್ಟು ರುಬ್ಬಲು ಗ್ರೈಂಡಿಂಗು ತಂತ್ರ
ಮನೆ ಕೆಲಸಗಳಿಗೆ ಇರಲೊಬ್ಬ ಆಳು
ತಪ್ಪಿತೆನ್ನುವರು ಕೆಲಸದಾ ಗೋಳು!

ಸಾಲದು ಸಮಯ ನೋಡಲು ಸೀರಿಯಲ್ಲು
ಒಂದಿನಿತು ನಿದ್ದೆ ಇರಲು ಮದ್ಯಾಹ್ನದಲ್ಲು
ಬಿಡುವಿನಲಿ ಸವಿಯಲು ಕುರುಕಲು ತಿಂಡಿ
ಹೀಗಾದರೆಂತು ಹೇಳಿ ಕರಗುವುದು ಬಾಡಿ!

## !!ಹೃದಯಾಂತರಾಳದ ಅಳಲು!!

ಕಾಣದಾ ಬೇಗೆಯೊಂದು ಜಗವನಾವರಿಸಿ
ಬತ್ತಿ ಹೋಗುತಿಹ ಮಂದಿಯಾ ಮನದಿ
ಸ್ಫುರಿಸಿ ಪ್ರೀತಿ ಪ್ರೇಮದಾ ಒರತೆ
ಹಚ್ಚೆಹುದಿಂದು ಮಾನವೀಯತೆಯ ಹಣತೆ!

ನಾನೇ ಹೆಚ್ಚು ಎನುವ ಹುಚ್ಚ ಬಿಡಿಸಿ
ನಾವು ಒಂದೇ ಎನುವ ಪಾಠ ಕಲಿಸಿ
ಜಾತಿ ಮತ ಗಡಿ ಗುಡಿ ನುಡಿ ಭೇದ ಸರಿಸಿ
ಬೆಸೆದಿಹುದು ಮನಗಳ ದ್ವೇಷ ಮರೆಸಿ!

ನೆಲ ಮುಗಿಲ ನಡವೆ ಹರಿದಿಹುದಿಂದು
ನೇಹತುಂಬಿದಾ ನೆರವಿನಾ ಕಡಲು
ನೊಂದ ಮನಗಳಿಗೆ ಸಾಂತ್ವನದ ನೆಳಲು
ಬಂದಿಹಾ ಬೇಗೆನೀಗಿ ಜಗ ನಗಲೆಂಬುದೇ
ಹೃದಯಾಂತರಾಳದ ಅಳಲು!

## !!ಮನವಾಗಲೀ ಬಯಲು!!

ಏಕೋ ಕಾಣೆ ಅಂತರಾಳದೀ
ಬತ್ತಿ ಹೋಗುತಿದೆ ಪ್ರೀತಿ ಪ್ರೇಮದಾ ಒರತೆ
ಕತ್ತಲಾಗಿಹ ಮನದಿ ಹಚ್ಚುಬಾ ದೇವ
ಮಾನವೀಯತೆಯ ಹಣತೆ!

ತನ್ನದಲ್ಲದ ನೆಲಕೆ ತನ್ನದಲ್ಲದ ಜಲಕೆ
ಏಕಿನಿತು ಈ ಜನಕೆ ಮೋಹ
ಇರುವುದೆಲ್ಲವು ದೇವನಾ ದಾನವೆಂದರಿತು
ಕಲೆತು ಬಾಳದೆ ಮಾಡುವರೇಕೆ ಕಲಹ!

ಆ ಮತ ಈ ಮತ
ಎಂದೆನುತ ಕಲಕದಿರಿ ಚಿತ್ತ
ಗಡಿ- ಗುಡಿ-ನುಡಿ ಎನುತ
ಕಟ್ಟದಿರಿ ಕೋಟೆ ಮನದ ಸುತ್ತ!

ಒಂದೇ ನೆಲ ಒಂದೇ ಮುಗಿಲು
ನಡುವೆ ಭೇದ ಭಾವ ಕಡಲು
ಇರಲೋಂದೇ ಅನ್ನ ನೀರು ನೆಳಲು
ತರತಮವು ಕಳೆದು ಮನವಾಗಲೀ ಬಯಲು!



# ಚಿಣ್ಣರ ಚಿತ್ತಾರ





ಅಭಿನವ ರಮೇಶ್



ಕರಣ್ ಪ್ರಸಾದ್
ಕತಾರ್







ಅನ್ವಿತ ಪ್ರಶಾಂತ





ಶ್ರೇಯ ರಾಘವೇಂದ್ರ





ಶ್ರೀಯ ಸತೀಶ್





ಸಾರ್ಥಕ್ ರಾವ್



ಪ್ರಣವ್ ಶಿವಯೋಗಿ ಒಮನ್






# ನೇಸರದ ಚಿತ್ತಾರ

ರಮೇಶ ಭಟ್







# ನೇಸರದ ಚಿತ್ತಾರ

ರಮೇಶ ಭಟ್









**ವಾಣಿಯ ಸಮಸ್ತ ಓದುಗರಿಗೆ**

**ಗೌರಿ - ಗಣೇಶ ಹಬ್ಬದ ಶುಭಾಶಯಗಳು**











Interfaith Neighbors

Neighbors Helping Neighbors Since 1988

We are raising funds for Meals On Wheels of Monmouth County
We request each family to donate a minimum of $20
Click here to donate --> https://www.paypal.me/kcob

**ನಿಮ್ಮ ಸಹಾಯಕ್ಕೆ ವಂದನೆಗಳು!**

**ಪ್ರಕಾಶಕರು:**
ಬೃಂದಾವನ ಕನ್ನಡ ಸಂಘ
501(3)(c) ಪಡೆದ ಚಾರಿಟಿ ಸಂಸ್ಥೆ
Karnataka Cultural Organization (KCO) Brindavana
New Jersy, USA

www.Brindavana.org

© 2020. All right reserved. No part of this newsletter may be reproduced, photocopied, or reused without prior permission from the publisher.
ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು
ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ:**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.
www.brindavana.org ಅನ್ನ್ ವಿಸಿಟ್ ಮಾಡಿ, ನಿಮ್ಮ ವಿವರಗಳನ್ನು ನೀಡಿ ಸದಸ್ಯತ್ವವನ್ನು ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.


ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ
ಬೃಂದಾವನ
ಸುಮಧುರ ಸ್ನೇಹ ಸಮ್ಮಿಲನ ನಮ್ಮ ಬೃಂದಾವನ